# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಜೂನ್ 23, 2021

ಸಂಪುಟ : 48 ಸಂಚಿಕೆ : 49 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**ದಾಖಲಾತಿ** 2021-22ನೇ ಸಾಲಿನ ಶೈಕ್ಷಣಿಕ ಸಾಲಿಗಾಗಿ ಶಾಲೆಗಳಲ್ಲಿ ದಾಖಲಾತಿ ಆರಂಭವಾಗಿದೆ. ಕೊರೊನಾ ಭಯದ ನಡುವೆಯೂ ಪೋಷಕರು ಮಕ್ಕಳನ್ನು ಶಾಲೆಗೆ ದಾಖಲಿಸಲು ಆಗಮಿಸುತ್ತಿದ್ದಾರೆ. ದಾವಣಗೆರೆ ನಿಟುವಳ್ಳಿಯ ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ ನೋಂದಣಿ ಪ್ರಕ್ರಿಯೆ.

## 3ನೇ ಅಲೆಯಿಂದ ಮಕ್ಕಳಿಗೆ ರಕ್ಷಣೆ

### ಅಪೌಷ್ಟಿಕತೆ ನಿವಾರಣೆ, ಪೋಷಕರಿಗೆ ಲಸಿಕೆ ನೀಡಲು ಸಚಿವೆ ಶಶಿಕಲಾ ಜೊಲ್ಲೆ ಸೂಚನೆ

ದಾವಣಗೆರೆ, ಜೂ. 22 - ಕೊರೊನಾದ ಮೂರನೇ ಅಲೆ ಮಕ್ಕಳಿಗೆ ಹೆಚ್ಚು ಬಾಧಿಸಲಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಿರುವ ಹಿನ್ನೆಲೆಯಲ್ಲಿ, ಮಕ್ಕಳಿಗೆ ತೊಂದರೆಯಾಗದಂತೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.



ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿ ನಡೆದ ಸಭೆಯಲ್ಲಿ ಅವರು ಈ ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಕೊರೊನಾದಿಂದ 52 ಮಕ್ಕಳು ಅನಾಥರಾಗಿದ್ದಾರೆ. ಸಾವಿರಕ್ಕೂ ಹೆಚ್ಚು ಮಕ್ಕಳು ತಂದೆ ಇಲ್ಲವೇ ತಾಯಿಯನ್ನು ಕಳೆದುಕೊಂಡಿದ್ದಾರೆ. ಜಿಲ್ಲೆಯಲ್ಲೂ ಸಹ ಒಂದು ಮಗು ಅನಾಥವಾಗಿದೆ ಹಾಗೂ 100 ಮಕ್ಕಳು ಏಕಪೋಷಕರಾಗಿದ್ದಾರೆ ಎಂದರು.

ಮೂರನೇ ಅಲೆಯಲ್ಲಿ ಇಂತಹ ಪರಿಸ್ಥಿತಿ ಎದುರಾಗಬಾರದು. ವಿಶೇಷವಾಗಿ ಪೌಷ್ಟಿಕತೆ ಕೊರತೆ ಇರುವ ಮಕ್ಕಳ ಮೇಲೆ ಕೊರೊನಾ ಹೆಚ್ಚು ಪರಿಣಾಮ ಬೀರುತ್ತದೆ. ಜಿಲ್ಲೆಯಲ್ಲಿ 8 ಸಾವಿರ ಅಪೌಷ್ಟಿಕ ಮಕ್ಕಳಿದ್ದಾರೆ. ಇವರ ಅಪೌಷ್ಟಿಕತೆ ನೀಗಿಸಲು ಹಾಗೂ ಅಂತಹ ಮಕ್ಕಳ ಪೋಷಕರಿಗೆ ಲಸಿಕೆ ನೀಡಲು ಕ್ರಮ ತೆಗೆದುಕೊಳ್ಳಬೇಕು ಎಂದವರು ಹೇಳಿದರು.

ಕೊರೊನಾ ನಂತರ ನಿಲ್ಲಿಸಲಾಗಿರುವ ರಾಷ್ಟ್ರೀಯ ಪೌಷ್ಠಿಕಾಂಶ ಕೇಂದ್ರ(ಎನ್.ಆರ್.ಸಿ.)ಗಳನ್ನು ಮತ್ತೆ ಆರಂಭಿಸಬೇಕು ಎಂದು ಜೊಲ್ಲೆ ಸೂಚನೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ವಿಜಯ ಕುಮಾರ್ ಮಾತನಾಡಿ, ಜಿಲ್ಲೆಯ 11,966 ವಿಕಲಚೇತನರಿಗೆ ಲಸಿಕೆ ನೀಡಲಾಗಿದೆ. ಒಟ್ಟಾರೆ ಶೇ.84.91ರಷ್ಟು ಜನರಿಗೆ ಲಸಿಕೆ ನೀಡಲಾಗಿದ್ದು, ಈ ವರ್ಗದ ಲಸಿಕೆಯಲ್ಲಿ ದಾವಣಗೆರೆ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಹೆಚ್.ಓ. ಡಾ. ನಾಗರಾಜ್, ಮಕ್ಕಳಿಗೆ ಪ್ರತ್ಯೇಕ ಐ.ಸಿ.ಯು. ಅಗತ್ಯವಿರುತ್ತದೆ. ಇಂತಹ ಒಟ್ಟು (2ನೇ ಪುಟಕ್ಕೆ)

### ಜಿಲ್ಲೆಯಲ್ಲಿ ಮಕ್ಕಳಿಗಾಗಿ 10 ಕೋವಿಡ್ ಕೇರ್ ಸೆಂಟರ್

ಜಿಲ್ಲೆಯಲ್ಲಿ ಕೊರೊನಾ ಸೋಂಕಿತ ಮಕ್ಕಳಿಗಾಗಿ ಹತ್ತು ಕೊವಿಡ್ ಕೇರ್ ಸೆಂಟರ್‌ಗಳನ್ನು ಆರಂಭಿಸಲಾಗಿದೆ. ಈ ಕೇಂದ್ರಗಳಲ್ಲಿ 2,350 ಬೆಡ್‌ಗಳನ್ನು ಅಳವಡಿಸಲಾಗಿದೆ.

ಹಿಂದುಳಿದ ವರ್ಗಗಳ ಇಲಾಖೆಯ ಸಹಯೋಗದಲ್ಲಿ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ವಿಜಯ ಕುಮಾರ್ ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನ ಆವರಗೊಳ್ಳ, ಒಡೆಯರ ಹಳ್ಳಿ, ಜಗಳೂರು ತಾಲ್ಲೂಕಿನ ಮುಗ್ಗಿದರಾಗಿ ಹಳ್ಳಿ, ಉದ್ದಗಟ್ಟಿ, ಚನ್ನಗಿರಿ ತಾಲ್ಲೂಕಿನ ಕಾರಿಗನೂರು, ಹರಿಹರ ತಾಲ್ಲೂಕಿನ ನಂದಿತಾವರೆ, ದೇವರಹಳ್ಳಿ, ಹೊನ್ನಾಳಿ ತಾಲ್ಲೂಕಿನ ಸಿಂಗಟಗೆರೆ, ಮಾದನಬಾವಿಗಳಲ್ಲಿ ಕೇಂದ್ರಗಳ ತೆರೆಯಲಾಗಿದೆ.

## ಮಕ್ಕಳ ಮೇಲೆ 3ನೇ ಅಲೆ ಪರಿಣಾಮ

### ವಿದ್ಯಾರ್ಥಿಗಳು, ಸಿಬ್ಬಂದಿಗೆ ಲಸಿಕೆ ನೀಡಿ ಕಾಲೇಜು ಆರಂಭಿಸಲು ರಾಜ್ಯ ಸರ್ಕಾರಕ್ಕೆ ದೇವಿಪ್ರಸಾದ್ ಶೆಟ್ಟಿ ಸಮಿತಿ ಶಿಫಾರಸ್ಸು

ಬೆಂಗಳೂರು, ಜೂ.22 - ಕೊರೊನಾ ಮೂರನೇ ಅಲೆ ಎದುರಿಸಲು ಸರ್ಕಾರ ಮುಂಜಾ ಗ್ರತಾ ಕ್ರಮ ಕೈಗೊಳ್ಳಬೇಕು, ಈ ಅಲೆಯಿಂದ ಮಕ್ಕಳ ಮೇಲೆ ಭಾರೀ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಡಾ. ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ತಿಳಿಸಿದೆ.

ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಕಾಲೇಜುಗಳನ್ನು ಪ್ರಾರಂಭಿಸಲು ಅಭ್ಯಂತರವಿಲ್ಲ. ಆದರೆ, ಇದಕ್ಕೂ ಮುನ್ನ ವಿದ್ಯಾರ್ಥಿ ಗಳು ಹಾಗೂ ಸಿಬ್ಬಂದಿಗೆ ಲಸಿಕೆ ಹಾಕಿಸಬೇಕು ಎಂದು ತಿಳಿಸಲಾಗಿದೆ.

ಎರಡನೇ ಅಲೆ ಸಂದರ್ಭದ ಲಾಕ್‌ಡೌನ್ ತೆರವಿನ ನಂತರ ವಾಣಿಜ್ಯ ಚಟುವಟಿಕೆಗಳಿಗೆ ಅವ ಕಾಶ ನೀಡಿರುವುದರಲ್ಲಿ ತಪ್ಪಿಲ್ಲ, ಆದರೆ ಎಚ್ಚರ ವಹಿಸಿ ಎಂದು ವರದಿಯಲ್ಲಿ ಹೇಳಲಾಗಿದೆ.

ಮುಂದಿನ ಮೂರು ತಿಂಗ ಳೊಳಗಾಗಿ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ನೀಡಬೇಕು, ಅದರಲ್ಲೂ ಬಡವರು ಹಾಗೂ ಗ್ರಾಮೀಣ ಪ್ರದೇಶದವರಿಗೆ ಲಸಿಕೆ ಯನ್ನು ಆಂದೋಲನ ರೀತಿಯಲ್ಲಿ ಕೈಗೊಳ್ಳಬೇಕು.

ಮೂರನೇ ಅಲೆ ತಡೆ ಹಾಗೂ ಮುಂಜಾಗ್ರತಾ ಕ್ರಮಕ್ಕೆ ಸಂಬಂಧಿ ಸಿದಂತೆ ರಾಜ್ಯ ಸರ್ಕಾರ ಡಾ. ದೇವಿಶೆಟ್ಟಿ ನೇತೃತ್ವದ ಸಮಿತಿ ರಚಿಸಿ ವರದಿ ಕೇಳಿತ್ತು.

ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವ ರನ್ನು ಇಂದು ಭೇಟಿ ಮಾಡಿದ ತಜ್ಞರ ಸಮಿತಿ ಮಧ್ಯಂತರ ವರದಿ ಸಲ್ಲಿಸಿತು.

ವರದಿ ಸ್ವೀಕರಿಸಿ ತಜ್ಞರಿಂದ ಮಾಹಿತಿ ಪಡೆದ ನಂತರ ಮಾತ ನಾಡಿದ ಮುಖ್ಯಮಂತ್ರಿ, ಮೂರನೇ ಅಲೆ ಸಂದರ್ಭದಲ್ಲಿ ಮಕ್ಕಳಿಗೆ ಹೆಚ್ಚಾಗಿ ಸೋಂಕು ತಗಲುವ ಸಾಧ್ಯತೆ ಇದೆ ಎಂದು ಹೇಳಿದ್ದು, ಇದನ್ನು ತಡೆಯಲು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ.

ಜಿಲ್ಲೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ, ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಮಕ್ಕಳ ಹೆಚ್.ಡಿ.ಯು ಘಟಕ, ಮಕ್ಕಳ ತೀವ್ರ ನಿಗಾ ಘಟಕ ಸ್ಥಾಪನೆ, ಮಕ್ಕಳ ಆಸ್ಪತ್ರೆ ಸ್ಥಾಪನೆ ಕುರಿತು ಸಲಹೆ ನೀಡಿದ್ದಾರೆ.

3ನೇ ಅಲೆ ತಡೆಗಟ್ಟಲು ಮಾನವ ಸಂಪನ್ಮೂಲ, ಆರ್ಥಿಕ (2ನೇ ಪುಟಕ್ಕೆ)

## ರಿಯಾಯ್ತಿ ಆಸ್ತಿ ತೆರಿಗೆ ಗಡುವು ವಿಸ್ತರಣೆ

ಬೆಂಗಳೂರು, ಜೂ.22 - ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 5ರಷ್ಟು ರಿಯಾಯಿತಿ ದರದಲ್ಲಿ ಆಸ್ತಿ ತೆರಿಗೆ ಪಾವತಿಗೆ ಜುಲೈ 31 ರವರೆಗೆ ಅವಕಾಶ ನೀಡಲಾಗಿದೆ.

ಬೆಂಗಳೂರು ಮಹಾನಗರ ಹೊರತುಪಡಿಸಿ ಮೈಸೂರು, ದಾವಣಗೆರೆ, ತುಮಕೂರು ಸೇರಿದಂತೆ ಎಲ್ಲಾ ಪಾಲಿಕೆ ಹಾಗೂ ನಗರಸಭೆ ಮತ್ತು ಪುರಸಭೆಗಳಿಗೆ ಈ ಆದೇಶ ಅನ್ವಯವಾಗಲಿದೆ.

ಕೊರೊನಾ ಹಿನ್ನೆಲೆಯಲ್ಲಿ ಕರ್ಫ್ಯೂ ಮತ್ತು ಲಾಕ್ ಡೌನ್ ಜಾರಿಯಿಂದ ಸಾರ್ವಜ ನಿಕರು ಸಂಕಷ್ಟ ಎದುರಿಸುವಂತಾಗಿತ್ತು. ಇದನ್ನು ಮನಗಂಡು ಜೂನ್ 30ರವರೆಗೆ ಇದ್ದ ಆಸ್ತಿ ತೆರಿಗೆ ವಿನಾಯಿತಿಯನ್ನು ಮತ್ತೆ ಒಂದು ತಿಂಗಳಿಗೆ ವಿಸ್ತರಿಸಲಾಗಿದೆ.

ಆಗಸ್ಟ್ 1ರ ನಂತರ ತೆರಿಗೆ ಪಾವತಿಸುವವರು ಮಾಸಿಕ ಶೇಕಡ 2ರಷ್ಟು ದಂಡದೊಂದಿಗೆ ತೆರಿಗೆ ಪಾವತಿಸಬೇಕಾಗುತ್ತದೆ.

## ಎಲ್ಲಾ ವಹಿವಾಟಿಗೆ ಅವಕಾಶ ನೀಡಿ

### ಡಿಸಿಗೆ ಎಸ್ಸೆಸ್ ಸೂಚನೆ, ಡಿಸಿ ಭರವಸೆ, ಸಂಜೆ ಸರ್ಕಾರದ ಆದೇಶ



ದಾವಣಗೆರೆ, ಜೂ.22- ಜಿಲ್ಲೆಯಲ್ಲಿ ಎಲ್ಲಾ ವ್ಯಾಪಾರ, ವಹಿವಾಟಿಗೆ ಅನುಮತಿ ನೀಡುವಂತೆ ಶಾಸಕ ಶಾಮನೂರು ಶಿವಶಂಕರಪ್ಪ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು. ಮಂಗಳವಾರ ಬೆಳಿಗ್ಗೆ ನಗರದ ಜವಳಿ, ಬೆಳ್ಳಿ-ಬಂಗಾರ ವರ್ತಕರು ಸೇರಿದಂತೆ ಹಲವು ವಾಣಿಜ್ಯ ವಹಿವಾಟುಗಳ ವರ್ತಕರ ನಿಯೋಗ ಎಸ್ಸೆಸ್ ನಿವಾಸಕ್ಕೆ ಆಗಮಿಸಿ ಮನವಿ ಸಲ್ಲಿಸಿತು.

ಈ ಮನವಿಗೆ ಸ್ಪಂದಿಸಿದ ಎಸ್ಸೆಸ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಸಂಪರ್ಕಿಸಿ ಜಿಲ್ಲೆಯಲ್ಲಿ ವ್ಯಾಪಾರ ವಹಿವಾಟುಗೆ ಅನುಮತಿ ನೀಡುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳು ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಇಂದು ಅಥವಾ ನಾಳೆಯಿಂದಲೇ ಲಾಕ್ ಡೌನ್ ತೆರವಿಗೆ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು. ಜಿಲ್ಲಾಧಿಕಾರಿಗಳು ಭರವಸೆ ನೀಡಿ (3ನೇ ಪುಟಕ್ಕೆ)

### ಜಿಲ್ಲೆಯಲ್ಲಿ ಎಲ್ಲಾ ಅಂಗಡಿಗಳಿಗೆ ಅನುಮತಿ

ದಾವಣಗೆರೆ, ಜೂ. 22- ಹವಾ ನಿಯಂತ್ರಿತ ಮಳಿಗೆ, ಮಾಲ್ ಮತ್ತು ಸಮುಚ್ಛಯಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಮಾದರಿ ಮಳಿಗೆಗಳನ್ನು ಬೆಳಗ್ಗೆ 6 ರಿಂದ ಮಧ್ಯಾಹ್ನ 1 ಗಂಟೆವರೆಗೆ ತೆರೆಯಲು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅನುಮತಿ ನೀಡಿ ಆದೇಶ ಹೊರಡಿಸಿದ್ದಾರೆ.


ದಾವಣಗೆರೆ ಜಿಲ್ಲೆಯಲ್ಲಿ ಸೋಮವಾರದಿಂದ ಸೀಮಿತ ಅಂಗಡಿಗಳನ್ನು ಮಧ್ಯಾಹ್ನ 2 ಗಂಟೆಯವರೆಗೆ ತೆರೆಯಲು ಅನುಮತಿ ನೀಡಲಾಗಿತ್ತು. ನಂತರದಲ್ಲಿ ಮೊಬೈಲ್ ಹಾಗೂ ಸ್ಟೇಷನರಿ ಅಂಗಡಿಗಳಿಗೆ ಮಂಗಳವಾರದಿಂದ ಅನುಮತಿ ನೀಡಲಾಗಿತ್ತು.

ಇದಕ್ಕೂ ಮುಂಚೆ ಚಾಮರಾಜನಗರ, ದಾವಣಗೆರೆ, ಹಾಸನ ಮತ್ತು (3ನೇ ಪುಟಕ್ಕೆ)

## ಕಲಾವಿದರ ನೆರವಿಗೆ ಸಿಎಂ ಚಾಲನೆ

### 20 ಸಾವಿರ ಕಲಾವಿದರಿಗೆ 6.23 ಕೋಟಿ ರೂ. ನೆರವು

ಬೆಂಗಳೂರು, ಜೂ.22 - ಕೊರೊನಾ 2ನೇ ಅಲೆಯಿಂದ ಸಂಕಷ್ಟದಲ್ಲಿರುವ ಕಲಾವಿದರುಗಳಿಗೆ ಸರ್ಕಾರದಿಂದ ಆರ್ಥಿಕ ನೆರವು ನೀಡಿಕೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಗರದಲ್ಲಿ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೋವಿಡ್ 2ನೇ ಅಲೆಯಿಂದ ಸಂಕಷ್ಟಕ್ಕೆ ಸಿಲುಕಿದ ಕಲಾವಿದರಿಗೆ 3,000 ರೂ. ಆರ್ಥಿಕ ನೆರವು ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ, ಇಪ್ಪತ್ತು ಸಾವಿರಕ್ಕೂ ಹೆಚ್ಚು ಕಲಾವಿದರಿಗೆ ಡಿ.ಬಿ.ಟಿ. ಮೂಲಕ ಒಟ್ಟು 6.23 ಕೋಟಿ ರೂ. ನೆರವು ನೀಡಲಾಗುತ್ತಿದೆ ಎಂದು ತಿಳಿಸಿದರು.

2ನೇ ಅಲೆಯಿಂದ ಸಂಕಷ್ಟಕ್ಕೀಡಾದ ದುರ್ಬಲ ವರ್ಗದವರಿಗೆ ಒಟ್ಟು 2,050 ಕೋಟಿ ರೂ.ಗೂ ಅಧಿಕ ಮೊತ್ತದ ಆರ್ಥಿಕ ನೆರವಿನ ಪ್ಯಾಕೇಜ್ ಘೋಷಿಸಿದ್ದು, ಈಗಾಗಲೇ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ, ಕಟ್ಟಡ ನಿರ್ಮಾಣ ಕಾರ್ಮಿಕರಿಗೆ, ಬೀದಿಬದಿ ವ್ಯಾಪಾರಿಗಳು ಮೊದಲಾದವರಿಗೆ ಡಿ.ಬಿ.ಟಿ. ಮೂಲಕ ಆರ್ಥಿಕ ನೆರವನ್ನು ನೇರವಾಗಿ ಅವರ ಖಾತೆಗೆ ವರ್ಗಾಯಿಸಲಾಗಿದೆ. ಉಳಿದ ವರ್ಗಗಳಿಗೂ ಶೀಘ್ರವೇ ನೆರವು ನೀಡಲು ಕ್ರಮ ವಹಿಸಲಾಗುತ್ತಿದೆ ಎಂದರು.

ಮೊದಲ ಅಲೆಯ ಸಂದರ್ಭದಲ್ಲಿಯೂ ಕಲಾವಿದರಿಗೆ ನೆರವು ನೀಡಲಾಗಿತ್ತು. ಈ ಬಾರಿಯೂ ಸರ್ಕಾರ ಅವರ ನೆರವಿಗೆ ಧಾವಿಸಿದೆ.

ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಿ, ಕಲಾವಿದರ (2ನೇ ಪುಟಕ್ಕೆ)

## 3 ನೇ ಅಲೆಯಿಂದ ಮಕ್ಕಳ ಮೇಲೆ ಪರಿಣಾಮವಿಲ್ಲ : ಕೇಂದ್ರ ಸ್ಪಷ್ಟನೆ

ನವದೆಹಲಿ ಜೂ. 22 – ಕೊರೊನಾದ ಮೂರನೇ ಅಲೆಯಿಂದ ಮಕ್ಕಳ ಮೇಲೆ ತೀವ್ರ ಇಲ್ಲವೇ ಹೆಚ್ಚಿನ ಪರಿಣಾಮವಾಗುತ್ತದೆ ಎನ್ನುವ ಯಾವುದೇ ಸೂಚನೆ ದೊರೆತಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮೂರನೇ ಅಲೆಯಿಂದ ಮಕ್ಕಳ ಮೇಲೆ ಆಗುವ ಪರಿಣಾಮಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸಿರುವ ಏಐಐಎಂಎಸ್ ನಿರ್ದೇಶಕ ರಣದೀಪ್ ಗುಲೇರಿಯ, ಮುಂದಿನ ಕೊರೊನಾ (2ನೇ ಪುಟಕ್ಕೆ)

## ಪರೀಕ್ಷೆ ನಡೆಸುವಾಗ ಸಾವು ಸಂಭವಿಸಿದರೆ ಸರ್ಕಾರವೇ ಹೊಣೆ

**ಆಂಧ್ರಕ್ಕೆ ಸುಪ್ರೀಂ ತಾಕೀತು**

ನವದೆಹಲಿ ಜೂ. 22 – ಆಂಧ್ರ ಪ್ರದೇಶ ಸರ್ಕಾರ 12ನೇ ತರಗತಿಯ ಮಂಡಳಿ ಪರೀಕ್ಷೆ ನಡೆಸುವಾಗ ಸಾವೇನಾದರೂ ಸಂಭವಿಸಿದರೆ ಅದಕ್ಕೆ ರಾಜ್ಯ ಸರ್ಕಾರವೇ ಹೊಣೆಯಾಗಲಿದೆ ಎದು ಸುಪ್ರೀಂ ಕೋರ್ಟ್ ತಿಳಿಸಿದೆ.

ಆಂಧ್ರಪ್ರದೇಶ ಹಾಗೂ ಕೇರಳ ರಾಜ್ಯಗಳು (2ನೇ ಪುಟಕ್ಕೆ)

## 90 ಪಾಸಿಟಿವ್, 9 ಸಾವು 103 ಗುಣಮುಖ

ದಾವಣಗೆರೆ, ಜೂ.22- ಜಿಲ್ಲೆಯಲ್ಲಿ ಮಂಗಳವಾರ 90 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 9 ಜನರು ಮೃತಪಟ್ಟಿದ್ದಾರೆ. 103 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿ ಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾನಲ್ಲಿ 40, ಹರಿಹರ 13, ಜಗಳೂರು 3, ಚನ್ನಗಿರಿ 19, ಹೊನ್ನಾಳಿ 10 ಹಾಗೂ ಹೊರ ಜಿಲ್ಲೆಯ ಐವರಲ್ಲಿ ಸೋಂಕು ಕಾಣಿಸಿಕೊಂಡಿದೆ. (2ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 151 ಅಡಿ 6 ಇಂಚು
ಒಳ ಹರಿವು: 13307 ಕ್ಯೂಸೆಕ್ಸ್
ಹೊರ ಹರಿವು : 78 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 136.7 ಅಡಿ


### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ನಗರದ ವಾಸಿಗಳಾದ **ಚಂದ್ರಿಕಾ ಎಸ್.ಬಿ. ಬಿನ್ ಲೇಟ್ ಎಸ್.ಎಸ್. ಬಕ್ಕಪ್ಪ ಮತ್ತು ರೂಪಾ ಎಸ್.ಬಿ ಬಿನ್ ಲೇಟ್ ಎಸ್.ಎಸ್. ಬಕ್ಕಪ್ಪ** ಇವರುಗಳ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ನಮ್ಮ ಕಕ್ಷಿದಾರರುಗಳು ಈ ಕೆಳಕಂಡ ಆಸ್ತಿಗಳಲ್ಲಿ ತಮಗೆ ಬರಬೇಕಾದ ಹಿಸ್ಸೆಯ ಬಗ್ಗೆ ದಾವಣಗೆರೆ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 83/2011 ನ್ನು ಸಲ್ಲಿಸಿದ್ದು, ಸದರಿ ದಾವೆಯು ದಿನಾಂಕ 07.02.2019 ರಂದು ಪ್ರಾರಂಭಿಕ ಡಿಕ್ರಿಯಾಗಿದ್ದು, ಸದರಿ ಡಿಕ್ರಿಯ ಪ್ರಕಾರ ನಮ್ಮ ಕಕ್ಷಿದಾರರಿಗೆ ತಲಾ 1/3ನೇ ಭಾಗದ ಹಿಸ್ಸೆ ಇರುವುದಾಗಿ ತೀರ್ಮಾನವಾಗಿರುತ್ತದೆ. ಸದರಿ ಪ್ರಾರಂಭಿಕ ಡಿಕ್ರಿಯ ಪ್ರಕಾರ ಷೆಡ್ಯೂಲ್ ಆಸ್ತಿಗಳಲ್ಲಿ ತಮಗೆ ಬರಬೇಕಾದ ಹಿಸ್ಸೆಯನ್ನು ವಿಭಾಗಿಸಿಕೊಡುವಂತೆ ನಮ್ಮ ಕಕ್ಷಿದಾರರು ಮಾನ್ಯ ನ್ಯಾಯಾಲಯದಲ್ಲಿ ಎಫ್.ಡಿ.ಪಿ.ನಂ 21/2019ನ್ನು ಸಲ್ಲಿಸಿದ್ದು, ಸದರಿ ಪ್ರಕರಣವು ಹಾಲಿ ಚಾಲ್ತಿಯಲ್ಲಿರುತ್ತದೆ. ಸದರಿ ವಿಷಯವು ತಿಳಿದಿದ್ದರೂ ಸಹ ಷೆಡ್ಯೂಲ್ ಆಸ್ತಿಗಳ ಹಾಲಿ ಖಾತೆದಾರರು ಷೆಡ್ಯೂಲ್ ಆಸ್ತಿಗಳನ್ನು ಬೇರೆಯವರಿಗೆ ಪರಭಾರೆ ಮಾಡುವ ತರಾತುರಿಯಲ್ಲಿರುವುದಾಗಿ ತಿಳಿದು ಬಂದಿರುತ್ತದೆ. ಷೆಡ್ಯೂಲ್ ಆಸ್ತಿಗಳ ಪೈಕಿ ದಾವಣಗೆರೆ ತಾಲ್ಲೂಕು, ಆಲೂರು ಗ್ರಾಮದ ರಿ.ಸ.ನಂ.137/1 ರಲ್ಲಿ ವಿಸ್ತೀರ್ಣ 05 ಎಕರೆ 17 ಗುಂಟೆ ಜಮೀನನ್ನು ಹಾಲಿ ಖಾತೆದಾರರಾದ **ಶ್ರೀಮತಿ ಎಸ್.ಎಂ. ಹೇಮಾವತಿ ಕೋಂ ಎಸ್.ಎಸ್. ಮಲ್ಲಿಕಾರ್ಜುನ್** ಮತ್ತು **ಎಸ್.ಎಂ. ಮಂಜುನಾಥ ಬಿನ್ ಎಸ್.ಎಸ್. ಮಲ್ಲಿಕಾರ್ಜುನ್** ಇವರುಗಳು ದಿನಾಂಕ 09.03.2021 ರಂದು **ಶ್ರೀ ಎಲ್.ಎಂ. ಹನುಮಂತಪ್ಪ ಮತ್ತು ಎಲ್.ಹೆಚ್. ಸಂತೋಷಕುಮಾರ್** ಇವರಿಗೆ ಖರೀದಿ ಪತ್ರ ನೋಂದಣಿ ಮಾಡಿಸಿಕೊಟ್ಟಿದ್ದು, ಸದರಿಯವರು ದಿನಾಂಕ 26.03.2021ರಂದು ಜಿಯಾವುಲ್ಲಾ ವಜೀದ್ ಸಾಬ್ ಇವರಿಗೆ ಖರೀದಿ ಪತ್ರ ನೋಂದಾಯಿಸಿ ಕೊಟ್ಟಿರುವುದು ದಾಖಲೆಗಳ ಮುಖಾಂತರ ತಿಳಿದುಬಂದಿರುತ್ತದೆ. ಸದರಿ ಜಿಯಾವುಲ್ಲಾ ವಜೀದ್ ಸಾಬ್ ಇವರು ಸದರಿ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುವ ತರಾತುರಿಯಲ್ಲಿರುವುದಾಗಿ ತಿಳಿದು ಬಂದಿರುತ್ತದೆ. ಷೆಡ್ಯೂಲ್ ಆಸ್ತಿಗಳಲ್ಲಿ ನಮ್ಮ ಕಕ್ಷಿದಾರರಿಗೆ ತಲಾ 1/3ನೇ ಭಾಗದ ಹಿಸ್ಸೆ ಇರುವುದಾಗಿ ಮಾನ್ಯ ನ್ಯಾಯಾಲಯದಲ್ಲಿ ತೀರ್ಮಾನವಾಗಿರುವುದರಿಂದ ಮತ್ತು ಷೆಡ್ಯೂಲ್ ಆಸ್ತಿಗಳಲ್ಲಿ ಸದರಿ ಹಿಸ್ಸೆಯು ಇನ್ನೂ ವಿಭಾಗವಾಗದೇ ಇರುವುದರಿಂದ ಸಾರ್ವಜನಿಕರು ಯಾರೇ ಆಗಲಿ ಸದರಿ ಆಸ್ತಿ ಬಗ್ಗೆ ಯಾವುದೇ ರೀತಿ ಕ್ರಯದ ಖರೀದಿ ಕರಾರು ಪತ್ರವಾಗಲೀ ಅಥವಾ ಕ್ರಯಪತ್ರವಾಗಲೀ ಅಥವಾ ಇನ್ನಾವುದೇ ರೀತಿಯ ಪತ್ರ ವ್ಯವಹಾರವನ್ನಾಗಲೀ ಅಥವಾ ಹಣಕಾಸಿನ ವ್ಯವಹಾರವನ್ನಾಗಲೀ ಮಾಡಬಾರದೆಂದು ತಿಳಿಯಪಡಿಸಲಾಗಿದೆ. ಒಂದು ವೇಳೆ ಸದರಿ ಷೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ತೆರನಾದ ವ್ಯವಹಾರ ಮಾಡಿದಲ್ಲಿ ನಮ್ಮ ಕಕ್ಷಿದಾರರಿಗೆ ಬಂಧನಕಾರಿಯಾಗಿರುವುದಿಲ್ಲ ಮತ್ತು ಮುಂದೆ ಆಗುವ ತಂಟೆ ತಕರಾರುಗಳಿಗೆ ನೀವುಗಳೇ ಜವಾಬ್ದಾರರಾಗುತ್ತೀರಿ.

**ಷೆಡ್ಯೂಲ್**

**ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಸ.ನಂ 140 ವಿಸ್ತೀರ್ಣ 25 ಎಕರೆ, 16 ಗುಂಟೆ, ದಾವಣಗೆರೆ ತಾಲ್ಲೂಕು ಅಕ್ಕಸಾಲಿ ದ್ಯಾಮಜ್ಜಿಹಳ್ಳಿ ಗ್ರಾಮ ಸ.ನಂ 11 ವಿಸ್ತೀರ್ಣ 13 ಎಕರೆ, 21 ಗುಂಟೆ, ದಾವಣಗೆರೆ ತಾಲ್ಲೂಕು ಅಕ್ಕಸಾಲಿ ದ್ಯಾಮಜ್ಜಿಹಳ್ಳಿ ಗ್ರಾಮ ಸ.ನಂ 12/1ಪಿ ವಿಸ್ತೀರ್ಣ 11 ಎಕರೆ, 23 ಗುಂಟೆ, ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಸ.ನಂ 139/ಪಿ2 ವಿಸ್ತೀರ್ಣ 19ಎಕರೆ, 06 ಗುಂಟೆ, ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಸ.ನಂ 137/1 ವಿಸ್ತೀರ್ಣ 05 ಎಕರೆ, 17 ಗುಂಟೆ, ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಸ.ನಂ 137/2ಪಿ ವಿಸ್ತೀರ್ಣ 02 ಎಕರೆ, 00 ಗುಂಟೆ, ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಸ.ನಂ 137/3 ವಿಸ್ತೀರ್ಣ 05 ಎಕರೆ, 16 ಗುಂಟೆ, ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಸ.ನಂ 139/ಪಿ1 ವಿಸ್ತೀರ್ಣ 13 ಎಕರೆ, 27 ಗುಂಟೆ, ದಾವಣಗೆರೆ ಸಿಟಿ, ಕೆ.ಆರ್. ರಸ್ತೆ, ಡೋ.ನಂ #1027, ದಾವಣಗೆರೆ ಸಿಟಿ ಬಿ.ಟಿ.ಲೇಔಟ್ ಡೋ.ನಂ #101, ದಾವಣಗೆರೆ ಸಿಟಿ, ಕೆ.ಆರ್. ರಸ್ತೆ, ಡೋ.ನಂ #697/1ಎ&1ಬಿ, ದಾವಣಗೆರೆ ಸಿಟಿ, ಚೌಕಿಪೇಟೆ ಡೋ ನಂ. # 681**

ಸಂಪರ್ಕಿಸಬೇಕಾದ ವಿಳಾಸ:
**ಶ್ರೀ ಎ.ಎಂ. ಹೆಗಡೆ,** ವಕೀಲರು
#82/18, ಪಿ.ಬಿ.ರಸ್ತೆ, ಇಂಡಿಯನ್ ಬ್ಯಾಂಕ್ ಹತ್ತಿರ,
ದಾವಣಗೆರೆ. ಮೊ. ನಂ. 94483 05888



॥ ಶ್ರೀ ಆಂಜನೇಯಸ್ವಾಮಿ ಪ್ರಸನ್ನ ॥

### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ನಾಗರತ್ನಮ್ಮ ಮತ್ತು ಮಕ್ಕಳು
"ಶ್ಯಾಮ್ ಕಾಂಪ್ಲೆಕ್ಸ್" ಕಾಲೇಜ್ ರಸ್ತೆ, ನಿಟುವಳ್ಳಿ, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 24.05.2021ನೇ ಸೋಮವಾರ ಮಧ್ಯಾಹ್ನ 3.30ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಜಮೀನ್ದಾರ್ ಶ್ರೀ ಹುಲ್ಲುಮನೆ ಶಿವಾನಂದಪ್ಪನವರು**

ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆ ಯನ್ನು**

**ದಿನಾಂಕ 23.06.2021ನೇ ಬುಧವಾರ ಬೆಳಿಗ್ಗೆ 10.30 ರಿಂದ 12.00 ರವರೆಗೆ ದಾವಣಗೆರೆ ಸಿಟಿ, ನಿಟುವಳ್ಳಿಯಲ್ಲಿರುವ ಮೃತರ ಸ್ವಗ್ರಾಮದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು :**

**ಶ್ರೀಮತಿ ಅನುಪಮ, ಶ್ರೀ ರಾಮಕೃಷ್ಣಪ್ಪ ಮತ್ತು ಮಕ್ಕಳು**
**ಶ್ರೀಮತಿ ಅಂಕಿತ, ಶ್ರೀ ಪ್ರಸಾದ್ ಮತ್ತು ಮಕ್ಕಳು**
**ಶ್ರೀಮತಿ ದಿವ್ಯಾ, ಶ್ರೀ ಶ್ಯಾಮ್ ಮತ್ತು ಮಕ್ಕಳು**
**ಚಿ || ಸುನೀಲ್**





### ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 22.06.2021ರಂದು ಅಕಾಲಿಕವಾಗಿ ನಿಧನರಾದ

**ಶ್ರೀ ಬಿ. ಗಿರೀಶ್ (ಜಲ್ಲಿ ಗಿರೀಶ್)**

ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.
ಶ್ರೀಯುತ ಗಿರೀಶ್ ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಎ.ಎಂ. ಮಳಗಿ ಮತ್ತು ಕುಟುಂಬ ವರ್ಗ ಹಾಗೂ ಸಿಬ್ಬಂದಿ ವರ್ಗ

**ರೂಬಿ ಸ್ಟೋನ್ ಕ್ರಷರ್**

ಗೌಳೇರಹಟ್ಟಿ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ
**ಸೈಟ್‌ಗಳು ಮಾರಾಟಕ್ಕಿವೆ**
50x50 East, 50x50 West, 40x60 North, 30x50 North, 30x50 West, 60x45 North East Cornner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಎಲ್.ಎಸ್. ಪ್ರಭು ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಭಟ್ಟರು ಬೇಕಾಗಿದ್ದಾರೆ.
ಸ್ವಾಮಿ ಹೋಟೆಲ್ (ಸಸ್ಯಹಾರಿ)
ಶಾಮನೂರು ರಸ್ತೆ, ದಾವಣಗೆರೆ.
97434 82356

**ಸೈಟ್‌ಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ 60x40 North, 60x38 East, 30x50 North, 30x40 West, 50x50 West, 30x38 30x38 East ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದಂತಹ ಸತ್ಕಾರ್ಯಗಳಿಗೆ ಧನಸಹಾಯವಿತ್ತ ದಾನಿಗಳು.
ಶ್ರೀ ಕೆ.ಆರ್.ಸಿದ್ದಪ್ಪ
ನಿವೃತ್ತ ಪ್ರಾಂಶುಪಾಲರು. ದಾವಣಗೆರೆ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**2BHK ಮನೆಗಳು ಬಾಡಿಗೆಗೆ ಇವೆ**
ಕುಂದವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್ ಕಾವೇರಿ ಅಪಾರ್ಟ್‌ಮೆಂಟ್ ಹಿಂಭಾಗದಲ್ಲಿ ಎಲ್ಲಾ ಆಧುನಿಕ ಸೌಕರ್ಯಗಳಿರುವ ಎರಡು ಬೆಡ್‌ರೂಂ ಹಾಗೂ ಅಟ್ಯಾಚ್ ಬಾತ್‌ರೂಂವುಳ್ಳ 14 ಹೊಸ ಮನೆಗಳು ರಿಯಾಯಿತಿ ದರದಲ್ಲಿ ಬಾಡಿಗೆಗೆ ಇವೆ.
73380 43912
63663 27368

**ಕಡಿಮೆ ಬೆಲೆಯಲ್ಲಿ**
Sanitizer 5 ltr can Rs. 450, 50 Rs - 5 Pieces N95. True view Oximeter Rs. 1050. (2 years Replacement warranty), Vaporizer - Rs. 150. Face shield, Face guard, All Covid-19 Products available in 70% Discount. Contact :
80882 10419

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ವ್ಯವಸ್ಥೆ ಇದೆ.
ಸಂಬಳ: 20,000/- ಸಂಪರ್ಕಿಸಿ
7829191921

**ಬೇಕಾಗಿದ್ದಾರೆ**
ಬಾತಿ ಮತ್ತು ಆವರಗೆರೆಯಲ್ಲಿ ಸೆಕ್ಯೂರಿಟಿ ಆಗಿ ಕೆಲಸ ಮಾಡಲು ರೂಂ ಬಾಯ್ಸ್, ಆಯಾಗಳು ಬೇಕಾಗಿದ್ದಾರೆ. ಲಾಡ್ಜ್‌ನಲ್ಲಿ ಮತ್ತು ದಾವಣಗೆರೆ ಸುತ್ತ-ಮುತ್ತಲು ಗಾರ್ಡ್ಸ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ.
7411307071, 9880648207
9591300676

**WANTED**
FEMALE NURSES TO WORK IN A REPUTED HOSPITAL IN DAVANAGERE. ACCOMADATION PROVIDED. GOOD SALARY. CALL US ON
80735 15690

**WANTED**
Tally with 2-3 years Experience. Boys only
S.K. Trading Company
Chowkipete, Davangere.
Exclusive Salary
89041 33227

**Required**
Experienced office Assistant having Knowledge in Tally and GST Filing. Contact :
99000 22030

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಬೇಕಾಗಿದ್ದಾರೆ**
ಕ್ಯಾಷಿಯರ್-1, ಸೇಲ್ಸ್ ಗರ್ಲ್ಸ್ - 5, ಸೇಲ್ಸ್ ಬಾಯ್ಸ್ -5 ಕ್ಲೀನಿಂಗ್-1
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು.
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
Call : 9480795548, 87468 00714
Whatsapp No: 70199 83025 (Resume)

**ಸೇಲ್ಸ್ & ಮಾರ್ಕೆಟಿಂಗ್**
ಮಾರ್ಕೆಟಿಂಗ್ ಕೆಲಸ ಮಾಡಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ.
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಸ್ ಏರಿಯಾ, ದಾವಣಗೆರೆ.
96206 38679

**ಮಾರಾಟಕ್ಕಿವೆ**
ದಾವಣಗೆರೆ ವಿನೋಬನಗರದಲ್ಲಿ 3ನೇ ಮೇನ್, 9ನೇ ಕ್ರಾಸ್, ಸಿದ್ದಿ ವಿನಾಯಕ ಸ್ಕೂಲ್ ರೋಡ್ ಕಾರ್ನರ್ ಬಿಲ್ಡಿಂಗ್ ಉತ್ತರಕ್ಕೆ 1 ಮನೆ, ಪಶ್ಚಿಮಕ್ಕೆ 3 ಮಳಿಗೆಗಳು ಮಾರಾಟಕ್ಕಿವೆ.
96204 96012

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
98443 60459, 87220 14318
95352 69849

**ಸೈಟ್‌ಗಳು ಮಾರಾಟಕ್ಕಿವೆ**
ಆಕರ್ಷಕ ಬೆಲೆಯಲ್ಲಿ ಸೈಟುಗಳು ಮಾರಾಟಕ್ಕಿವೆ. ಎಸ್.ಎಸ್. ಲೇಔಟ್ 4ನೇ ಮೇನ್, 10ನೇ ಕ್ರಾಸ್‌ನಲ್ಲಿ 7350 Sqft North Facing ಮತ್ತು ಎಂ.ಸಿ.ಸಿ. 'ಎ' ಬ್ಲಾಕ್ ಆಶ್ರಯ ಹಾಸ್ಪಿಟಲ್ ರೋಡ್‌ನಲ್ಲಿ 95x142 South Facing
98869 88099, 97319 99977
8884228109

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ಶಾಪ್ ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಮತ್ತು ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
7406740635
7406396332

**ಮನೆ ಮಾರಾಟಕ್ಕಿದೆ**
ಮೌನೇಶ್ವರ ಬಡಾವಣೆ, ನಿಟುವಳ್ಳಿಯಲ್ಲಿ 30x45, ಅಳತೆಯ ಡ್ಯೂಪ್ಲೆಕ್ಸ್ ಮನೆ, ಕಾರ್ ಪಾರ್ಕಿಂಗ್, 4 ಬೆಡ್ ರೂಂ, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಹಾಗೂ ವಾಸ್ತು ಪ್ರಕಾರ ಇರುವ 27 ಚದುರಡಿ ಮನೆ ಮಾರಾಟಕ್ಕಿದೆ.
ಫೋ. : 99017 19991

**ಉತ್ತಮ ಗುಣಮಟ್ಟದ**
ಎಂ.ಸ್ಯಾಂಡ್, 20.MM ಡಸ್ಟ್ ಮಿಕ್ಸ್ ಗ್ರಾವೆಲ್‌ಗಾಗಿ
ಸಂಪರ್ಕಿಸಿ
98445195627

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಕೆ.ಹೆಚ್.ಬಿ ಯಲ್ಲಿ ಪೂರ್ವ ದಿಕ್ಕಿನ 30x50 ಸೈಟು ಮಹಾನಗರ ಪಾಲಿಕೆಯಲ್ಲಿ ಎಂಟ್ರಿಯಾಗಿರುತ್ತದೆ.
94488 74011

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**MNC SOFTWARE & BPO**
New Branch in Davangere
Dist any Degree freshers Can apply
98444 92888

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ಎಲ್‌ಐಸಿ ಪ್ರತಿನಿಧಿಗಳಿಂದ ಪ್ರತಿಭಟನೆ



**ಹರಪನಹಳ್ಳಿ**

ಹರಪನಹಳ್ಳಿ, ಜೂ.22- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳು ಪಟ್ಟಣದ ಭಾರತೀಯ ಜೀವ ವಿಮಾ ನಿಗಮದ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಈ ವೇಳೆ ನಿಗಮದ ಪ್ರತಿನಿಧಿಗಳ ಒಕ್ಕೂಟದ ಅಧ್ಯಕ್ಷ ಹೇಮಣ್ಣ ಮೋರಿಗೇರಿ, ವಿಭಾಗೀಯ ಸಂಘಟನಾ ಕಾರ್ಯದರ್ಶಿ ಎಂ. ವೀರಭದ್ರಪ್ಪ, ನಿಕಟ ಪೂರ್ವ ಅಧ್ಯಕ್ಷ ಎಚ್.ಎಂ. ಚರಂತಿಮಠ್, ಉಪಾಧ್ಯಕ್ಷ ಸತ್ತೂರು ವೀರಯ್ಯ, ಸದಸ್ಯರುಗಳಾದ ಡಿ. ಬಸವರಾಜ್ ಕುಮಾರನಹಳ್ಳಿ, ಬೆಣ್ಣಿಹಳ್ಳಿ ರಾಜಪ್ಪ, ಎಂ. ಹಾಲಪ್ಪ, ಎ. ರೇವಣ್ಣ, ಗುಡಿಹಳ್ಳಿ ಶಿವಕುಮಾರ, ಜಗದೀಶ, ಕೂಡ್ಲಿಗಿ ಎಚ್. ವೃಷಭೇಂದ್ರ, ಎಲ್. ಶಿವಕುಮಾರ, ಎಚ್. ಎಸ್. ಮಹಾಂತೇಶ, ಬಣಕಾರ ಕೊಟ್ರೇಶ್ ಇನ್ನಿತರರಿದ್ದರು.

# ಹೊನ್ನಾಳಿ : 13 ಬಸ್ಸುಗಳ ಸಂಚಾರ ಆರಂಭ

ಹೊನ್ನಾಳಿ, ಜೂ.22- ಸುಮಾರು ಎರಡು ತಿಂಗಳುಗಳಿಂದ ಸ್ಥಗಿತಗೊಂಡಿದ್ದ ಕೆಎಸ್‌ಆರ್‌ಟಿಸಿ ಬಸ್ಸುಗಳ ಸಂಚಾರ ಪಟ್ಟಣದ ಖಾಸಗಿ ಬಸ್ ನಿಲ್ದಾಣದಿಂದ ಪುನರಾರಂಭಗೊಂಡವು.

ಜೂನ್ 21ರ ಸೋಮವಾರ ಹೊನ್ನಾಳಿ - ನ್ಯಾಮತಿ ಮಾರ್ಗವಾಗಿ ಶಿವಮೊಗ್ಗಕ್ಕೆ 2 ಬಸ್ಸುಗಳು, ಸಾಸ್ವೆಹಳ್ಳಿ - ಆನವೇರಿ - ಹೊಳಲೂರು ಮಾರ್ಗವಾಗಿ ಶಿವಮೊಗ್ಗಕ್ಕೆ 2 ಬಸ್ಸುಗಳು, ಶಿಕಾರಿಪುರ ಹಾಗೂ ಬೆಂಗಳೂರಿಗೆ ತಲಾ ಒಂದು ಬಸ್ ಹಾಗೂ ದಾವಣಗೆರೆ - ಹೊನ್ನಾಳಿ ಮಾರ್ಗವಾಗಿ ಶಿವಮೊಗ್ಗಕ್ಕೆ 6 ಬಸ್ಸುಗಳು ಸೇರಿದಂತೆ ಒಟ್ಟು 12 ಬಸ್ಸುಗಳು ಹೊನ್ನಾಳಿ ಡಿಪೋದಿಂದ ಸಂಚಾರ ಪ್ರಾರಂಭಿಸಿದವು.

ಪ್ರಯಾಣಿಕರ ಸಂಖ್ಯೆ ಕಡಿಮೆ ಇದ್ದ ಕಾರಣ ಎಲ್ಲಾ ಬಸ್‌ಗಳಿಂದ ಸೋಮವಾರ ಒಟ್ಟು 27 ಸಾವಿರ ರೂ. ಸಂಗ್ರಹವಾಗಿದೆ. ಇಂದು ಒಂದು



ಬಸ್ ಹೆಚ್ಚುವರಿಯಾಗಿ ಬೆಂಗಳೂರು ಮಾರ್ಗದಲ್ಲಿ ಸಂಚರಿಸಿದ್ದು, ಒಟ್ಟು 13 ಬಸ್‌ಗಳು ಹೊನ್ನಾಳಿ ಡಿಪೋದಿಂದ ಸಂಚಾರ ಪ್ರಾರಂಭಿಸಿವೆ ಎಂದು ಡಿಪೋ ವ್ಯವಸ್ಥಾಪಕ ಕೆ. ಮಹೇಶ್ವರಪ್ಪ ತಿಳಿಸಿದರು.

ಕೊರೊನಾ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದ ಚಾಲಕರು, ನಿರ್ವಾಹಕರು, ಒಂದು ಡೋಸ್ ಪಡೆದು, ಕೊರೊನಾ ನೆಗೆಟಿವ್ ರಿಪೋರ್ಟ್ ಹೊಂದಿದ ಚಾಲಕರು, ನಿರ್ವಾಹಕರು ಹಾಗೂ ತರಬೇತಿ ನಿರತ ಚಾಲಕರು, ನಿರ್ವಾಹಕರಿಗೆ ಆದ್ಯತೆಯ ಮೇರೆಗೆ ಕರ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಕೆಎಸ್ಸಾರ್ಟಿಸಿ ಸಾರ್ವಜನಿಕರ ಸೇವೆಗೆ ಬದ್ಧವಾಗಿದ್ದು, ನಷ್ಟ ಲೆಕ್ಕಿಸದೇ ಬಸ್‌ಗಳ ಸಂಚಾರ ಮುಂದುವರೆಸುತ್ತಿದೆ.

ಬಸ್‌ಗಳನ್ನು ನೀರಿನಿಂದ ಶುದ್ಧಗೊಳಿಸಿ, ಸ್ಯಾನಿಟೈಸ್ ಮಾಡಿ ಓಡಿಸಲಾಗುತ್ತಿದೆ. ಸಿಬ್ಬಂದಿ ಕೊರೊನಾ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುತ್ತಾರೆ. ಎಲ್ಲಾ ಹಂತಗಳಲ್ಲೂ ಸ್ವಚ್ಛತೆ ಕಾಪಾಡಲಾಗುತ್ತಿದೆ. ಶೇ.50 ರಷ್ಟು ಪ್ರಯಾಣಿಕರಿಗೆ ಅವಕಾಶ ನೀಡುವ ಮೂಲಕ ಸಾಮಾಜಿಕ ಅಂತರ ಪಾಲಿಸಲಾಗುತ್ತಿದೆ.

ಹೊನ್ನಾಳಿ ಡಿಪೋದಲ್ಲಿ ಒಟ್ಟು 43 ಬಸ್‌ಗಳು ಇವೆ. ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ಬಂದರೆ, ಹೆಚ್ಚುವರಿ ಬಸ್‌ಗಳನ್ನು ಬಿಡಲಾಗುತ್ತದೆ. ಪ್ರಯಾಣಿಕರು ಯಾವುದೇ ಹೆದರಿಕೆ ಇಟ್ಟುಕೊಳ್ಳದೇ, ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಾಸ್ಕ್‌ಗಳನ್ನು ಧರಿಸಿ ಪ್ರಯಾಣಿಸಬೇಕು ಎಂದು ಡಿಪೋ ವ್ಯವಸ್ಥಾಪಕ ಕೆ. ಮಹೇಶ್ವರಪ್ಪ ವಿನಂತಿಸಿದರು.

# ಮೆಕ್ಕೆಜೋಳ ಬೆಳೆಗೆ ಸೈನಿಕ ಹುಳು ಬಾಧೆ : ರೈತರ ಆತಂಕ



**ಜಗಳೂರು**

ಜಗಳೂರು, ಜೂ.22- ತಾಲ್ಲೂಕಿನಲ್ಲಿ ಪೂರ್ವ ಮುಂಗಾರಿನಲ್ಲಿ ತಾಲ್ಲೂಕಿನಾದ್ಯಂತ ಚೆನ್ನಾಗಿ ಮಳೆಯಾಗಿದ್ದರಿಂದ ರೈತರು ನಾ ಮುಂದು, ತಾ ಮುಂದು ಎಂದು ಬಿತ್ತನೆಗೆ ಸಿದ್ಧತೆ ನಡೆಸುತ್ತಿದ್ದಾರೆ. ಆದರೆ ಮೆಕ್ಕೆಜೋಳ ಬೆಳೆಗೆ ಸೈನಿಕ ಹುಳುಬಾಧೆ ಕಾಣಿಸಿಕೊಂಡಿದ್ದು ರೈತರು ಆತಂಕಗೊಂಡಿದ್ದಾರೆ.

ಜಗಳೂರು ತಾಲ್ಲೂಕಿನಲ್ಲಿ 32.000 ಹೆಕ್ಟೇರ್ ಮೆಕ್ಕೆಜೋಳದ ಗುರಿ ಬಿತ್ತನೆ ಇದ್ದು, ಇಲ್ಲಿಯವರೆಗೆ 12.000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಮುಂದುವರೆದಿದೆ. ಮೇ ತಿಂಗಳ ಮಾಹೆಯಲ್ಲಿ ಬಿತ್ತನೆ ಮಾಡಿರುವ ಮೆಕ್ಕೆಜೋಳಕ್ಕೆ 3-4 ದಿನಗಳಿಂದ ದೇವಿಕೆರೆ ಸುತ್ತಮುತ್ತಲು ಮತ್ತು ತಾಲ್ಲೂಕಿನ ವಿವಿಧ ಜಮೀನುಗಳಲ್ಲಿ ಲದ್ದಿ ಹುಳುಗಳ ಬಾಧೆ ಕಂಡುಬಂದಿದೆ.

ದಾವಣಗೆರೆಯ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತಜ್ಞರಾದ ಡಾ.ಸಣ್ಣ ಗೌಡ್ರು, ಡಾ. ಬಿ.ಓ. ಮಲ್ಲಿಕಾರ್ಜುನ್, ಡಾ. ರಘುರಾಜ್, ಕತ್ತಲಗೆರೆ ಕೃಷಿ ಸಂಶೋಧನಾ ಕೇಂದ್ರದ ಡಾ. ರಾಜಶೇಖರ್ ಇವರುಗಳ ತಂಡ ದೇವಿಕೆರೆ ಗ್ರಾಮದ ಮಲ್ಲಿಕಾರ್ಜುನ್ ಎಂಬ ರೈತರ ಜಮೀನಿನಲ್ಲಿ ವಿಜ್ಞಾನಿಗಳು ಲದ್ದಿ ಹುಳುಗಳ ಬಾಧೆ ಪರಿಶೀಲಿಸಿದರು.

ಜೂನ್ ತಿಂಗಳಲ್ಲಿ ಬಿತ್ತನೆ ಮಾಡುವ ಬದಲು ಮೇ ತಿಂಗಳಲ್ಲೇ ಅವಧಿಪೂರ್ವ ಬಿತ್ತನೆ ಮಾಡಿದ್ದರಿಂದಾಗಿ ಆರಂಭದಲ್ಲೇ ಸೈನಿಕ ಹುಳು ಬಾಧೆ ಕಾಣಿಸಿಕೊಂಡಿದೆ. ಜಿಲ್ಲೆಯ ಲ್ಲಿಯೇ ಇದು ಮೊದಲ ಪ್ರಕರಣ ವಾಗಿದ್ದು, ರೈತರಿಗೆ ಔಷಧ ಸಿಂಪರಣೆ ಮಾಡುವ ಬಗ್ಗೆ ವಿಜ್ಞಾನಿಗಳು ಸೂಕ್ತ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಬಿ.ವಿ. ಶ್ರೀನಿ ವಾಸಲು, ಆತ್ಮ ಯೋಜನೆ ತಾಂತ್ರಿಕ ವ್ಯವಸ್ಥಾಪಕ ಅನಿಲ್ ಕುಮಾರ್, ಪಶುವೈದ್ಯಾಧಿಕಾರಿ ಡಾ.ಲಿಂಗರಾಜ್ ಮತ್ತು ರೈತರು ಸೇರಿದಂತೆ ಇತರರು ಭಾಗವಹಿಸಿದ್ದರು.

## ಶಾಮನೂರಿನಲ್ಲಿ ಯೋಗ ದಿನ



ದಾವಣಗೆರೆ, ಜೂ.22- ಶಾಮನೂರಿನ ಶ್ರೀ ಆಂಜನೇಯ ಕಲ್ಯಾಣ ಮಂಟಪದಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು.

ಶಾಸಕ ಎಸ್.ಎ.ರವೀಂದ್ರನಾಥ್, ಬಿ.ಜಿ.ಸಂಗನಗೌಡ, ಎಲ್.ಎನ್. ಕಲ್ಲೇಶ್, ಪಾಲಿಕೆ ಉಪಮೇಯರ್ ಶಿಲ್ಪಾ ಜಯಪ್ರಕಾಶ್ ಹಾಗೂ ಉಪಾಧ್ಯಕ್ಷ ಉಮೇಶ್ ಪಾಟೀಲ್, ಉತ್ತರ ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಕೆ.ಎನ್. ಹನುಮಂತಪ್ಪ ವಕೀಲರು, ಕಾರ್ಯದರ್ಶಿಗಳಾದ ರಾಜು ಶಾಮನೂರು, ರಾಜೇಶ್, ಮಂಜು, ಸಂಗೀತ, ಶಾರದಾ ರಾಯ್ಕರ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ಸಂಕೋಳ್ ಚಂದ್ರಶೇಖರ್, ಕೆ.ಯುವರಾಜ್, ಬಿ.ವಾಸು, ಧನ್ಯಕುಮಾರ್, ಯುವ ಮೋರ್ಚಾ ಉಪಾಧ್ಯಕ್ಷ ಹರೀಶ್, ಪ್ರಭಣ್ಣ, ಒಬಿಸಿ ಮೋರ್ಚಾ ಅಧ್ಯಕ್ಷ ಸಿದ್ದಣ್ಣ ಅಡಾಣಿ, ಎಸ್ಸಿ ಮೋರ್ಚಾ ಉತ್ತರ ಅಧ್ಯಕ್ಷ ರವಿನಾಯ್ಕ, ಯೋಗ ಶಿಕ್ಷಕರಾದ ಮಂಜುನಾಥ್ ಅಖಂಡ ಮತ್ತಿತರರು ಭಾಗವಹಿಸಿದ್ದರು.

## ಸಾವು ಸಂಭವಿಸಿದರೆ ಸರ್ಕಾರವೇ ಹೊಣೆ

**(1ನೇ ಪುಟದಿಂದ)** ಮಾತ್ರ 12ನೇ ತರಗತಿ ಮಂಡಳಿ ಪರೀಕ್ಷೆ ನಡೆಸಲು ನಿರ್ಧರಿಸಿವೆ.

ಈ ಬಗ್ಗೆ ವಿಚಾರಣೆ ನಡೆಸಿರುವ ನ್ಯಾಯಮೂರ್ತಿಗಳಾದ ಎ.ಎಂ ಖಾನ್ವಿಲ್ಕರ್ ಹಾಗೂ ದಿನೇಶ್ ಮಹೇಶ್ವರಿ ಒಳಗೊಂಡ ಪೀಠ, 12ನೇ ತರಗತಿ ಮಂಡಳಿ ಪರೀಕ್ಷೆ ನಡೆಸಲು ಉತ್ತಮ ಕಾರಣಗಳನ್ನು ನೀಡಬೇಕಾಗುತ್ತದೆ. ಯಾವುದಾದರೂ ಸಾವು ಸಂಭವಿಸಿದರೆ ಅದಕ್ಕೆ ರಾಜ್ಯ ಸರ್ಕಾರವೇ ಹೊಣೆ ಎಂದು ತಿಳಿಸಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ರಾಜ್ಯ ಸರ್ಕಾರದ ಪರ ವಕೀಲ ಮಹಫೂಜ್ ನಜ್ಕಿ, ಸರ್ಕಾರ ಪರೀಕ್ಷೆ ನಡೆಸುವ ಬಗ್ಗೆ ಜುಲೈ ಮೊದಲ ವಾರದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ ಎಂದಿದ್ದಾರೆ. ಆದರೆ, ನಿರ್ಧಾರ ವಿಳಂಬ ಮಾಡುವ ಮೂಲಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅನಿಶ್ಚಿತತೆ ಸೃಷ್ಟಿಸುತ್ತಿರುವುದು ಏಕೆ ? ಎಂದು ಪ್ರಶ್ನಿಸಿರುವ ಪೀಠ, ಬುಧವಾರದ ಒಳಗೆ ನಿರ್ಧಾರ ತೆಗೆದುಕೊಳ್ಳುವಂತೆ ತಿಳಿಸಿದೆ.

## ಚರ್ಮ ಕುಶಲಕರ್ಮಿಗಳ ಪರಿಹಾರ ಧನಕ್ಕೆ ಅರ್ಜಿ

ದಾವಣಗೆರೆ, ಜೂ.22- ಕೋವಿಡ್-19 2ನೇ ಅಲೆಯ ಲಾಕ್‌ಡೌನ್ ಹಿನ್ನೆಲೆಯಲ್ಲಿ ಪಾದರಕ್ಷೆ ತಯಾರಿಕೆ, ದುರಸ್ತಿ ಹಾಗೂ ಚರ್ಮ ಹದ ಮಾಡುವ ಕಾಯಕದಲ್ಲಿ ತೊಡಗಿರುವ ಚಮ್ಮಾರರು, ಚರ್ಮ ಕುಶಲಕರ್ಮಿಗಳಿಗೆ ಸರ್ಕಾರದಿಂದ ನೀಡಲಾಗುವ ಪರಿಹಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಫಲಾನುಭವಿಗಳು ಆನ್‌ಲೈನ್ ಮೂಲಕ ಸೇವಾ ಸಿಂಧು ಪೋರ್ಟಲ್‌ನಲ್ಲಿ ಇದೇ ದಿನಾಂಕ 30 ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಜಿಲ್ಲಾ ಸಂಯೋಜಕ ಜಯರಾಮಯ್ಯ ತಿಳಿಸಿದ್ದಾರೆ.

## ಹರಿಹರ ತಾ.ನಲ್ಲಿ ಇಳಿಕೆ ಕಂಡ ಸೋಂಕು, ಟೆಸ್ಟ್

ಮಲೇಬೆನ್ನೂರು, ಜೂ.22- ಮಂಗಳವಾರ ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆಯ ಜೊತೆಗೆ ಟೆಸ್ಟ್ ಮಾಡಿಸಿಕೊಳ್ಳುವವರ ಸಂಖ್ಯೆಯೂ ಗಣನೀಯವಾಗಿ ಕಡಿಮೆ ಆಗಿದೆ.

246 ಟೆಸ್ಟ್‌ಗಳ ಪೈಕಿ 149 ಆರ್‌ಟಿಪಿಸಿಆರ್ ಮತ್ತು 97 ರ್‍ಯಾಪಿಡ್ ಟೆಸ್ಟ್ ಮಾಡಲಾಗಿದ್ದು, ರ್‍ಯಾಪಿಡ್ ಟೆಸ್ಟ್‌ನಲ್ಲಿ ಮೂವರಿಗೆ ಮಾತ್ರ ಸೋಂಕು ದೃಢಪಟ್ಟಿದೆ.

ಬೆಳಗಿನ ವರದಿ ಪ್ರಕಾರ ಆರ್‌ಟಿಪಿಸಿಆರ್ ಟೆಸ್ಟ್‌ನಲ್ಲಿ 10 ಜನರಿಗೆ ಪಾಸಿಟಿವ್ ಬಂದಿದೆ. ಹರಿಹರ ತಾಲ್ಲೂಕಿನಲ್ಲಿ ಇದುವರೆಗೆ ಇದ್ದ 3 ಕೋವಿಡ್ ಕೇರ್ ಸೆಂಟರ್‌ಗಳ ಪೈಕಿ ಕೊಂಡಜ್ಜಿ, ಎಸ್‌ಜೆವಿಪಿ ಸಿಸಿ ಸೆಂಟರ್‌ಗಳಲ್ಲಿ ಸೋಂಕಿತರು ಇಲ್ಲದ ಕಾರಣ ಕೇಂದ್ರವನ್ನು ಮುಚ್ಚಲಾಗಿದೆ. ಗುತ್ತೂರು ಸಿಸಿ ಸೆಂಟರ್‌ನಲ್ಲಿ ಮಾತ್ರ 31 ಜನ ಸೋಂಕಿತರಿದ್ದು, ಬುಧವಾರ ಮತ್ತಷ್ಟು ಜನ ಬಿಡುಗಡೆಯಾಗಲಿದ್ದಾರೆ ಎಂದು ಹೇಳಲಾಗಿದೆ.

## ಮಕ್ಕಳ ಮೇಲೆ ಪರಿಣಾಮವಿಲ್ಲ

**(1ನೇ ಪುಟದಿಂದ)** ಅಲೆಯಲ್ಲಿ ಮಕ್ಕಳ ಮೇಲೆ ತೀವ್ರ ಪರಿಣಾಮವಾಗುತ್ತದೆ ಇಲ್ಲವೇ ಮಕ್ಕಳ ಸೋಂಕಿನ ಹೆಚ್ಚು ಪ್ರಕರಣಗಳು ಕಂಡು ಬರುತ್ತವೆ ಎಂಬುದಕ್ಕೆ ಯಾವುದೇ ಸಾಕ್ಷಿಗಳಿಲ್ಲ ಎಂದಿದ್ದಾರೆ.

ಮಕ್ಕಳಿಗೆ ಸೋಂಕು ಬಂದರೂ ಅದು ಲಘು ತೀವ್ರತೆಯದ್ದಾಗಿರುತ್ತದೆ ಎಂಬುದನ್ನು ಮೊದಲ ಹಾಗೂ ಎರಡನೇ ಅಲೆ ತೋರಿಸಿದೆ ಎಂದವರು ಹೇಳಿದ್ದಾರೆ. ಆದರೆ, ಶಿಕ್ಷಣದಲ್ಲಿ ಲಿಂಗ ಅಂತರ, ಮಾನಸಿಕ ಒತ್ತಡ, ಸ್ಮಾರ್ಟ್‌ಫೋನ್ ವ್ಯಸನ ಹಾಗೂ ಶಿಕ್ಷಣ ಅವಕಾಶಗಳ ವಂಚನೆಯಿಂದ ಮಕ್ಕಳ ಮೇಲೆ ಮಹಾಮಾರಿ ಸಂದರ್ಭದಲ್ಲಿ ತೀವ್ರ ಹಾನಿಯಾಗುತ್ತದೆ. ಗ್ರಾಮೀಣ ಭಾಗದಲ್ಲಿ ಕಲಿಕೆಯ ಮೇಲೆ ತೀವ್ರ ಪರಿಣಾಮವಾಗಿದೆ ಎಂದವರು ಹೇಳಿದ್ದಾರೆ. ಮೊದಲ ಹಾಗೂ ಎರಡನೇ ಅಲೆ ನೋಡಿದಾಗ ಅದು ಒಂದೇ ರೀತಿ ಇದೆ. ಮಕ್ಕಳಿಗೆ ಸೋಂಕು ಬಂದರೂ ಅವರಿಗೆ ರಕ್ಷಣೆ ಇರುತ್ತದೆ. ವೈರಸ್ ಬದಲಾಗಿಲ್ಲ. ಹೀಗಾಗಿ ಮೂರನೇ ಅಲೆಯಲ್ಲಿ ಮಕ್ಕಳ ಮೇಲೆ ತೀವ್ರ ಪರಿಣಾಮವಾಗುವುದಿಲ್ಲ ಎಂದವರು ತಿಳಿಸಿದ್ದಾರೆ.

# 3ನೇ ಅಲೆಯಿಂದ ಮಕ್ಕಳಿಗೆ ರಕ್ಷಣೆ



**(1ನೇ ಪುಟದಿಂದ)** 60 ಪಿ.ಐ.ಸಿ. ಯು.ಗಳು ಜಿಲ್ಲೆಗೆ ಬೇಕಾಗಿವೆ. ಇದಕ್ಕಾಗಿ ಪ್ರಸ್ತಾವನೆ ಕಳಿಸಲಾಗಿದೆ ಎಂದು ಹೇಳಿದರು.

ತಜ್ಞ ವೈದ್ಯರ ನೇಮಕಾತಿಗೆ ರಾಜ್ಯ ಸರ್ಕಾರ 1.10 ಲಕ್ಷ ರೂ.ಗಳ ವೇತನ ನಿಗದಿ ಪಡಿಸಿದೆ. ಆದರೆ, ಈ ವೇತನಕ್ಕೆ ತಜ್ಞ ವೈದ್ಯರು ಬರುತ್ತಿಲ್ಲ. ಕನಿಷ್ಠ 2.50 ಲಕ್ಷ ರೂ.ಗಳ ವೇತನ ನಿಗದಿ ಪಡಿಸಿದರೆ ವೈದ್ಯರು ಲಭ್ಯವಾಗುತ್ತಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಶಾಸಕ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ಮಾತನಾಡಿ, ತಮ್ಮ ಜಗಳೂರು ಕ್ಷೇತ್ರ ದಾವಣಗೆರೆ ಹಾಗೂ ಬಳ್ಳಾರಿ ಜಿಲ್ಲೆಗಳ ನಡುವೆ ಹರಿದು ಹಂಚಿದೆ. 7 ಪಂಚಾಯಿತ್ತಿಗಳು ಹರಪನಹಳ್ಳಿಯಲ್ಲಿವೆ. ಅಲ್ಲಿನ ಸೋಂಕಿತರು ದಾವಣಗೆರೆಗೆ ಬಂದಾಗ ಆಸ್ಪತ್ರೆಯಲ್ಲಿ ಬೆಡ್ ಇಲ್ಲ ಎಂದು ತಿಳಿಸಲಾಗುತ್ತಿದೆ. ಬಳ್ಳಾರಿಗೆ ಹೋಗಲು ದೂರವಾಗುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊರೊನಾದಿಂದ ಅನಾಥವಾದ ಬಾಲಕಿಯೊಬ್ಬರ ಜೊತೆ ಸಚಿವೆ ಜೊಲ್ಲೆ ಮಾತನಾಡಿ, ಮುಂದಿನ ಜವಾಬ್ದಾರಿ ವಹಿಸಿಕೊಳ್ಳುವ ಭರವಸೆ ನೀಡಿದರು.

ಆಗ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಕೊರೊನಾದಿಂದ ಅನಾಥವಾದ ಹೊನ್ನಾಳಿಯ ಬಾಲಕಿಯೊಬ್ಬರ ಪಿಯುಸಿಯಿಂದ ಉನ್ನತ ಶಿಕ್ಷಣದವರೆಗಿನ ವೆಚ್ಚವನ್ನು ಭರಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಶಾಸಕ ಹಾಗೂ ಲಿಡ್ಕರ್ ಅಧ್ಯಕ್ಷ ಪ್ರೊ. ಲಿಂಗಣ್ಣ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವಿಜಯ ಮಹಾಂತೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಮತ್ತಿತರರು ಉಪಸ್ಥಿತರಿದ್ದರು.

## ಹಾವು ಕಡಿತಕ್ಕೆ ಚಿಕಿತ್ಸೆ ನೀಡಲು ನಿರ್ಲಕ್ಷ್ಯ : ಶಾಸಕ ಎಸ್‌ವಿಆರ್ ಬೇಸರ

ತಮ್ಮ ಕ್ಷೇತ್ರದ ಗುತ್ತಿದುರ್ಗದ ಜಗದೀಶ ಎಂಬ ಹತ್ತು ವರ್ಷದ ಬಾಲಕ ಹಾವು ಕಡಿತಕ್ಕೆ ಸಿಲುಕಿದ್ದ. ಸಿ.ಜಿ. ಆಸ್ಪತ್ರೆಗೆ ಬಂದಾಗ ಚಿಕಿತ್ಸೆ ನೀಡದೇ ಒಂದು ಗಂಟೆ ಕಾಯಿಸಿ, ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾಗಿದೆ. ಆ ಬಾಲಕನಿಗೆ ಚಿಕಿತ್ಸೆ ದೊರೆಯದೇ ಸಾವು ಸಂಭವಿಸಿದೆ ಎಂದು ಶಾಸಕ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ಹೇಳಿದರು.

ಈ ಬಗ್ಗೆ ಸ್ಪಷ್ಟನೆ ನೀಡಿದ ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಸಿ.ಜಿ. ಆಸ್ಪತ್ರೆಯನ್ನು ಕೊವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗಿದೆ. ಬಾಲಕನಿಗೆ ಸ್ಯಾರಿ ವಾರ್ಡ್‌ನಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಖಾಸಗಿ ಆಸ್ಪತ್ರೆಗೆ ರೆಫರೆನ್ಸ್ ಬರೆದು ಕಳಿಸಲಾಗಿದೆ ಎಂದರು.


## 'ಪೋಷಣ್' ರಾಜ್ಯಕ್ಕೆ 4ನೇ ಸ್ಥಾನ

ಕೇಂದ್ರ ಸರ್ಕಾರದ ಪೋಷಣ್ ಅಭಿಯಾನ ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರ 4ನೇ ಸ್ಥಾನದಲ್ಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ. 2019ರಲ್ಲಿ ಕರ್ನಾಟಕ ಈ ಯೋಜನೆಯಲ್ಲಿ ತಳ ಮಟ್ಟದಲ್ಲಿತ್ತು. ಈಗ ಪರಿಸ್ಥಿತಿ ಸುಧಾರಿಸುತ್ತಿದೆ. ಮುಂದಿನ ದಿನಗಳಲ್ಲಿ ಮೊದಲ ಇಲ್ಲವೇ ಎರಡನೇ ಸ್ಥಾನಕ್ಕೆ ಬರುವ ಪ್ರಯತ್ನ ನಡೆಸಲಾಗುವುದು ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು ಹೇಳಿದ್ದಾರೆ. ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದ ಮಕ್ಕಳ ಪ್ರಮಾಣ ಶೇ.0.3 ಇತ್ತು. ಅದೀಗ ಶೇ.0.18ಕ್ಕೆ ಇಳಿದಿದೆ ಎಂದವರು ಹೇಳಿದರು. ಅಂಗನವಾಡಿಗಳಿಗೆ ಒಳ್ಳೆಯ ಆಹಾರ ದೊರಕುವಂತೆ ಮಾಡಲು ನಿರಂತರ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆನ್‌ಲೈನ್ ಮೂಲಕ ಇಂಡೆಂಟ್ ಪಡೆಯುವಂತೆ ಮಾಡಿ ಪಾರದರ್ಶಕತೆ ತರಲಾಗುತ್ತಿದೆ. ಹಂತ ಹಂತವಾಗಿ ಇನ್ನಷ್ಟು ಸುಧಾರಣೆ ಮಾಡಲಾಗುವುದು ಎಂದವರು ಹೇಳಿದರು.

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 21.6.2021ರಂದು ನಿಧನರಾದ ದಾವಣಗೆರೆ ಗಾಂಧಿ ನಗರ ಪೊಲೀಸ್ ಠಾಣೆಯ ಮುಖ್ಯ ಪೇದೆ

**ಶ್ರೀ ಓಬಣ್ಣ (ಓಬಳೇಶ್)**




ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತಲ್ಲಿ ಪ್ರಾರ್ಥನೆ.

ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರು

- ✦ ನಾಯಕ ವಿದ್ಯಾರ್ಥಿ ನಿಲಯ ದಾವಣಗೆರೆ
- ✦ ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ
- ✦ ದಾವಣಗೆರೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ
- ✦ ಸರ್ಕಾರಿ ಪರಿಶಿಷ್ಟ ಪಂಗಡ ನೌಕರರ ಜಿಲ್ಲಾ ಘಟಕ, ದಾವಣಗೆರೆ ಜಿಲ್ಲೆ
- ✦ ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಮಹಿಳಾ ಸಮಾಜ

## ಎ.ಎಸ್. ಮಹಮದ್ ಖಾಸಿಂ ನಿಧನ



ದಾವಣಗೆರೆ ಕೆಟಿಜೆ ನಗರ 2ನೇ ಮುಖ್ಯ ರಸ್ತೆ 8ನೇ ತಿರುವಿನ ವಾಸಿ ವಿಶ್ರಾಂತ ಮುಖ್ಯೋಪಾಧ್ಯಾಯರಾದ ಎ.ಎಸ್.ಮಹಮದ್ ಖಾಸಿಂ (83) ಅವರು ದಿನಾಂಕ 22.06.2021ರ ಮಂಗಳವಾರ ಮಧ್ಯಾಹ್ನ 3.45ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅದೇ ದಿನ ಸಂಜೆ 8.45ಕ್ಕೆ ನಗರದ ಪಿ.ಬಿ.ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಯಿತು.

**ಮಾಸ್ಕ್ ಧರಿಸಿ ಕೊರೊನಾ ತೊಲಗಿಸಿ**

## ಮಕ್ಕಳ ಮೇಲೆ 3ನೇ ಅಲೆ ಪರಿಣಾಮ

**(1ನೇ ಪುಟದಿಂದ)** ಸಂಪನ್ಮೂಲ ಹಾಗೂ ಪರಿಣತರ ನೆರವು ಪಡೆಯುವ ಕುರಿತು ಸಮಿತಿ ಸಲಹೆ ನೀಡಿದೆ, ವಿವಿಧ ವೈದ್ಯಕೀಯ ಸಂಘಟನೆಗಳ ಸಹಯೋಗದೊಂದಿಗೆ ವೈದ್ಯರು, ದಾದಿಯರ ಕೊರತೆ ನಿವಾರಣೆ ಹಾಗೂ ರಾಜ್ಯದಲ್ಲಿರುವ ಎಲ್ಲ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆಯುವಂತೆ ಸಲಹೆ ಮಾಡಿದ್ದಾರೆ.

ಕಾರ್ಪೊರೇಟ್ ಸಂಸ್ಥೆಗಳ ಸಹಕಾರದಿಂದ ಸಂಪನ್ಮೂಲಗಳ ನೆರವು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕರ ಸಹ ಭಾಗಿತ್ವ ಪಡೆಯುವಂತೆಯೂ ತಿಳಿಸಿದ್ದಾರೆ.

ಅಪೌಷ್ಟಿಕತೆ ನಿವಾರಣೆಗೆ ಆದ್ಯತೆ ನೀಡುವಂತೆಯೂ ತಜ್ಞರ ಸಮಿತಿ ಸಲಹೆ ನೀಡಿದೆ, ಕೋವಿಡ್‌ಗೆ ತುತ್ತಾದ ಮಕ್ಕಳ ಮನೋಸ್ಥೈರ್ಯ ಹೆಚ್ಚಿಸಲು ಪ್ರತಿ ಆಸ್ಪತ್ರೆಯಲ್ಲಿ ಮನೋವೈದ್ಯರ ಸೇವೆ ಒದಗಿಸುವುದು ಸೂಕ್ತ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಆಕ್ಸಿಜನ್ ಕೊರತೆ ನಿವಾರಣೆ ಕುರಿತು ಕೈಗೊಳ್ಳಬಹುದಾದ ಕ್ರಮ, ಕೋವಿಡ್ ನಂತರ ತಲೆದೋರುವ ಆರೋಗ್ಯ ಸಮಸ್ಯೆಗಳ ಕುರಿತು ಎಚ್ಚರ ವಹಿಸುವುದು ಹಾಗೂ ಕೋವಿಡ್ ಅಲ್ಲದೆ ಇತರೆ ಆರೋಗ್ಯ ಸಮಸ್ಯೆಗಳಿಗೂ ಆದ್ಯತೆ ನೀಡುವ ಅಗತ್ಯವಿದೆ ಎಂದಿದ್ದಾರೆ.

ಮಕ್ಕಳಿಗೆ ಪರೀಕ್ಷೆ ನಡೆಸುವ ಬಗ್ಗೆ, ಕೋವಿಡ್ ಕೇರ್ ಸೆಂಟರ್‌ಗಳಲ್ಲಿರುವ ವ್ಯವಸ್ಥೆಗಳ ಕುರಿತು ಮಾಹಿತಿ ನೀಡಿದ್ದಾರೆ, ಕೋವಿಡ್ ನಿಯಂತ್ರಣಕ್ಕೆ ಲಸಿಕೆ ಅತ್ಯಂತ ಸೂಕ್ತ ಪರಿಹಾರವಾಗಿದ್ದು, ಲಸಿಕೆ ಅಭಿಯಾನ ಇನ್ನಷ್ಟು ತೀವ್ರಗೊಳಿಸಲು ತಿಳಿಸಿದ್ದಾರೆ ಎಂದರು.

ಲಸಿಕೆ ನೀಡಿಕೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದಕ್ಕೆ ಆದ್ಯತೆ ನೀಡುವಂತೆ ಸಲಹೆ ಮಾಡಲಾಗಿದೆ, ನಂತರ ವಷ್ಟೇ ಶಾಲಾ-ಕಾಲೇಜುಗಳನ್ನು ಹಂತ ಹಂತವಾಗಿ ತೆರೆಯುವ ಬಗ್ಗೆ ಚಿಂತನೆ ನಡೆಸಲು ಸಮಿತಿ ಸಲಹೆ ಮಾಡಿದೆ ಎಂದರು.

## 103 ಗುಣಮುಖ

**(1ನೇ ಪುಟದಿಂದ)** ದಾವಣಗೆರೆ ನಿಟುವಳ್ಳಿಯ 34 ವರ್ಷದ ಪುರುಷ, ಕೆಟಿಜೆ ನಗರದ 84 ವರ್ಷದ ವೃದ್ಧೆ, ಭಾಷಾ ನಗರದ 60 ವರ್ಷದ ಪುರುಷ, ಇಂದಿರಾ ನಗರದ 61 ವರ್ಷದ ಪುರುಷ, ಯಕ್ಕನಹಳ್ಳಿಯ 63 ವರ್ಷದ ಮಹಿಳೆ, ಲೋಕಿಕೆರೆಯ 72 ವರ್ಷದ ಪುರುಷ, ಚನ್ನಗಿರಿ ತಾಲ್ಲೂಕು ರಾಜಗೊಂಡನಹಳ್ಳಿಯ 60 ವರ್ಷದ ಪುರುಷ, ಹಿರಿಯನಹಳ್ಳಿಯ 50 ವರ್ಷದ ಪುರುಷ ಸೇರಿ 9 ಜನರು ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ 1680 ಸಕ್ರಿಯ ಪ್ರಕರಣಗಳಿದ್ದು, 510 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

ಇಬ್ಬರಲ್ಲಿ ಬ್ಲಾಕ್ ಫಂಗಸ್ ಕಾಣಿಸಿಕೊಂಡಿದ್ದು, 49 ಸಕ್ರಿಯ ಪ್ರಕರಣಗಳಿವೆ.

## ಕಲಾವಿದರ ನೆರವಿಗೆ ಚಾಲನೆ

**(1ನೇ ಪುಟದಿಂದ)** ದಾಖಲೆಗಳನ್ನು ಪರಿ ಶೀಲಿಸಿ, ಅತ್ಯಂತ ಪಾರದರ್ಶಕ ವಾಗಿ ನೆರವು ನೀಡಲು ಮಂಜೂ ರಾತಿ ನೀಡಲಾಗಿದೆ. ಫಲಾನುಭವಿ ಗಳು ಡಿ.ಬಿ.ಟಿ. ಆಪ್ ಮುಖಾಂತರ ತಮ್ಮ ಆಧಾರ್ ಸಂಯೋಜಿತ ಬ್ಯಾಂಕ್ ಖಾತೆಗೆ ನೆರವು ವರ್ಗಾವಣೆ ಆಗಿರುವುದನ್ನು ಖಾತರಿ ಪಡಿಸಿಕೊಳ್ಳಬಹುದು ಎಂದು ಮುಖ್ಯಮಂತ್ರಿ ತಿಳಿಸಿದರು.

# 42ನೇ ವಾರ್ಡಿನಲ್ಲಿ ಎಸ್ಸೆಸ್ ಲಸಿಕೆ ಶಿಬಿರ



ದಾವಣಗೆರೆ, ಜೂ.22- ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ನಡೆಸುತ್ತಿರುವ ಉಚಿತ ಕೋವಿಡ್ ಲಸಿಕಾ ಶಿಬಿರವು ನಗರ ಪಾಲಿಕೆಯ 42 ನೇ ವಾರ್ಡಿನ ಬಾಪೂಜಿ ಶಾಲೆಯ ಆವರಣದಲ್ಲಿ ನಿನ್ನೆ ನಡೆಯಿತು. ಕುವೆಂಪು ನಗರ ಹಾಗೂ ಸಿದ್ದವೀರಪ್ಪ ಬಡಾವಣೆ ನಾಗರಿಕರಿಗೆ ಲಸಿಕೆ ನೀಡಲಾಯಿತು.

ನಗರಸಭೆ ಮಾಜಿ ಸದಸ್ಯರಾದ ಶ್ರೀಮತಿ ವಿಜಯಾ ಜಿ.ಬಿ. ಲಿಂಗರಾಜ್ ಲಸಿಕೆ ನೀಡುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಕಾಂಗ್ರೆಸ್ ಮುಖಂಡ ಶಾಮನೂರು ಟಿ ಬಸವರಾಜ್, ನಗರ ಪಾಲಿಕೆ ಮಾಜಿ ಸದಸ್ಯ ಜಿ.ಬಿ. ಲಿಂಗರಾಜ್, ಮುಖಂಡರುಗಳಾದ ಗುರುನಾಥ್ ಛಾಬ್ರಿಯಾ, ಕೆ.ಪಿ. ರವಿ (ಧಣಿ), ಆಲೂರು ನಾಗಭೂಷಣ್, ರಾಜು, ಬೇತೂರು ನರೇಂದ್ರ, ಮಂಜುನಾಥ್, ಜಿ.ಎಲ್. ಸುಹಾಸ್ ಮತ್ತಿತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಪೊಲೀಸರಿಗೆ ಜಾಕೆಟ್ ನೀಡಲು ಉಮಾಪತಿ ಭರವಸೆ



ದಾವಣಗೆರೆ, ಜೂ.22- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ವರದಿಗಾರರ ಕೂಟ ಹಾಗೂ ಜಿಲ್ಲಾ ಯೋಗ ಒಕ್ಕೂಟದ ಆಶ್ರಯದಲ್ಲಿ ಆಯೋಜಿಸಿರುವ 7ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಶನಿವಾರ ನಗರದ ಬಡಾವಣೆ ಪೊಲೀಸ್ ಠಾಣೆಯಲ್ಲಿ ಟ್ರಾಫಿಕ್ ಪೊಲೀಸರಿಗೆ ಹಬೆ ಯಂತ್ರಗಳನ್ನು ವಿತರಣೆ ಮಾಡಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, ಕೋವಿಡ್ ಸೋಂಕಿನ ವಿರುದ್ಧ ಹೋರಾಡಲು ಯೋಗ ಒಂದು ಪ್ರಮುಖ ಅಸ್ತ್ರ. ರೋಗ - ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವೈದ್ಯಕೀಯ ಇಲಾಖೆಯವರು ಕೊಡುವ ಮೆಡಿಸಿನ್ ಜತೆಗೆ ಆಯುಷ್ ಇಲಾಖೆಯ ಕೆಲವು ಔಷಧಗಳು ಹಾಗೂ ಯೋಗಾಸನ ಉಪಯುಕ್ತವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಯೋಗಾಸನ ಮಾಡುವುದರಿಂದ ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ನಾವು ಬಲಶಾಲಿಗಳಾಗುತ್ತೇವೆ. ನಿತ್ಯ ಯೋಗ ಮಾಡುವುದರಿಂದ ರೋಗ - ರುಜಿನಗಳೊಂದಿಗೆ ಎಂತಹ ಸೋಂಕುಗಳನ್ನಾದರೂ ಕೂಡ ತಡೆಗಟ್ಟುವ ಸಾಮರ್ಥ್ಯ ಬೆಳೆಯುತ್ತದೆ. ಹೀಗಾಗಿಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಗ, ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂದು ಹೇಳಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಜೀವ್ ಅವರು ಮಾತನಾಡಿ, ಇದೀಗ ಮಳೆಗಾಲ ಪ್ರಾರಂಭವಾಗಿರುವುದರಿಂದ ಪೊಲೀಸರು ಮಳೆಯಲ್ಲಿ ತಮ್ಮ ಕರ್ತವ್ಯ ನಿಭಾಯಿಸಬೇಕಾದ ಪರಿಸ್ಥಿತಿ ಇದೆ. ಸಂಚಾರಿ ಪೊಲೀಸರಿಗೆ ಜಾಕೆಟ್ ಅಗತ್ಯವಿದೆ ಎಂದಾಗ, ಜವಳಿ ಉದ್ಯಮಿ ಬಿ.ಸಿ.ಉಮಾಪತಿ ಅವರು, ಜಾಕೆಟ್ ಖರೀದಿಗಾಗಿ ಒಂದು ಲಕ್ಷ ರೂ. ದೇಣಿಗೆ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ್ ರಾಯ್ಕರ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಲಸಿಕಾ ಅಭಿಯಾನ



ಮಲೇಬೆನ್ನೂರು, ಜೂ.21- ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಕೋವಿಡ್ ಲಸಿಕಾ ಅಭಿಯಾನಕ್ಕೆ ಸಿದ್ಧಾರೂಢರ ಮಠದಲ್ಲಿ ಪುರಸಭೆ ಮುಖ್ಯಾಧಿಕಾರಿ ದಿನಕರ್, ಉಪತಹಶೀಲ್ದಾರ್ ಆರ್.ರವಿ, ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ಅವರು ದೀಪ ಬೆಳಗಿಸಿ, ಚಾಲನೆ ನೀಡಿದರು.

ಪೌರ ಸೇವಾ ನೌಕರರ ಸಂಘದ ಜಿಲ್ಲಾಧ್ಯಕ್ಷ ಗುರುನಾಥ್, ಆರೋಗ್ಯಾಧಿಕಾರಿ ಗುರುಪ್ರಸಾದ್, ನವೀನ್, ಸಮುದಾಯ ಆರೋಗ್ಯ ಕೇಂದ್ರದ ಕಿರಣ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಬಿಎಲ್‌ಓ ದಂಡಿ ತಿಪ್ಪೇಸ್ವಾಮಿ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಬೆಳ್ಳೂಡಿಯಲ್ಲಿ ಫುಡ್‌ಕಿಟ್ ವಿತರಣೆ



ಮಲೇಬೆನ್ನೂರು, ಜೂ.22- ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೊಳಗಾಗಿರುವ ಬೆಳ್ಳೂಡಿ ಗ್ರಾಮದ ಆಟೋ ಚಾಲಕರಿಗೆ ಜಿ.ಪಂ. ಮಾಜಿ ಸದಸ್ಯರೂ ಆದ ವಕೀಲ ಎಂ.ನಾಗೇಂದ್ರಪ್ಪ ಅವರು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಫುಡ್‌ಕಿಟ್‌ಗಳನ್ನು ವಿತರಿಸಿದರು. ತಾ.ಪಂ. ಮಾಜಿ ಸದಸ್ಯ ಬೆಳ್ಳೂಡಿ ಬಸವರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ನರೇಂದ್ರ, ವಕೀಲ ಕೆ.ಚನ್ನಪ್ಪ, ಮುಖಂಡರಾದ ಸಿ.ಎನ್.ಹುಲುಗೇಶ್, ಬೆಳ್ಳೂಡಿ ಗ್ರಾ.ಪಂ. ಸದಸ್ಯರಾದ ದುಂಡೆಪ್ಪ, ಕೆ.ಹೆಚ್.ಮಂಜುನಾಥ್, ಉಮೇಶ್, ರಾಜನಹಳ್ಳಿ ಬೀರೇಶ್, ಎಳೆಹೊಳೆ ಬೀರೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಬಂಜಾರ್ ತಾಂಡಾಗಳಲ್ಲಿ ಇಂದು ಕೊರೊನಾ ಲಸಿಕೆ ಜಾಗೃತಿ ಅಭಿಯಾನ

ದಾವಣಗೆರೆ, ಜೂ.22- ಜಿಲ್ಲೆಯ ಎಲ್ಲಾ ಬಂಜಾರ ತಾಂಡಾಗಳಲ್ಲಿ ಕೊರೊನಾ ಲಸಿಕೆ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಎಸ್ಸಿ ಘಟಕದ ರಾಜ್ಯ ಉಪಾಧ್ಯಕ್ಷ ನಾಗರಾಜನಾಯ್ಕ, ಜಿಲ್ಲಾ ಕಾಂಗ್ರೆಸ್ ಎಸ್ಸಿ ವಿಭಾಗದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ನಾಳೆ ದಿನಾಂಕ 23 ರ ಬುಧವಾರ ಬೆಳಿಗ್ಗೆ 11ಕ್ಕೆ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಸವಾಪಟ್ಟಣ ಹೋಬಳಿ, ಹೊಸನಗರ ಬಂಜಾರ ತಾಂಡಾದಲ್ಲಿ ಲಸಿಕೆ ಜಾಗೃತಿ ಅಭಿಯಾನ ಆರಂಭವಾಗಲಿದೆ. 18 ರಿಂದ 45 ಹಾಗೂ ಮೇಲ್ಪಟ್ಟ ಎಲ್ಲರೂ ಕೂಡ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳುವಂತೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ನಾಗರಾಜ ನಾಯ್ಕ, ಡಾ. ಸಿ. ತುಳಸಿನಾಯ್ಕ, ಕಾಶೀನಾಥ್, ಶಿವಗಾನಾಯ್ಕ, ರಾಕೇಶ್, ಪರಮೇಶನಾಯ್ಕ, ಮಂಜಾನಾಯ್ಕ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶಿವನಾಯ್ಕ, ನಂಜಾನಾಯ್ಕ, ಡಾ. ತುಳಸಿನಾಯ್ಕ, ಬಿ.ಎಂ. ಈಶ್ವರ, ರಾಕೇಶ್, ಶಿವಮೂರ್ತಿ ಇದ್ದರು.

# ಅರಸು ಬಡಾವಣೆಯಲ್ಲಿ ಪಾರ್ಕ್ ನಿರ್ಮಿಸಿ



ದಾವಣಗೆರೆ, ಜೂ.22- ಬಸವ ಮಹಿಳಾ ಕೇಂದ್ರದಿಂದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಜನ್ಮ ದಿನದ ಪ್ರಯುಕ್ತ ನಗರದ ದೇವರಾಜ ಅರಸು ಬಡಾವಣೆಯ 'ಬಿ' ಬ್ಲಾಕ್‌ನಲ್ಲಿ ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.

ಪಾಲಿಕೆಯ ಸದಸ್ಯ ವಿನಾಯಕ ಪೈಲ್ವಾನ್ ಅವರು ಸಸಿಗಳನ್ನು ನೆಟ್ಟು, ಸಾರ್ವಜನಿಕರಿಗೆ ಆಕ್ಸಿಜನ್ ನೀಡುವ ಗಿಡಗಳನ್ನು ಬೆಳೆಸುವುದರಿಂದ ಮನುಷ್ಯನಲ್ಲಿರುವ ಪರಿಸರವನ್ನು ರಕ್ಷಿಸಿದಂತಾಗುತ್ತದೆ ಎಂದರು.

ಅತಿಥಿಯಾಗಿ ಆಗಮಿಸಿದ್ದ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ ಮಾತನಾಡಿ, ಎಸ್ಸೆಸ್ ಅವರು ಶಾಶ್ವತ ವಾಗಿ ಉಳಿಯುವಂತಹ ಕೆಲಸವನ್ನು ಸಮಾಜಕ್ಕೆ ಮಾಡಿದ್ದಾರೆ. ಅವರು ಒಬ್ಬ ವ್ಯಕ್ತಿ ಅನ್ನುವು ದಕ್ಕಿಂತ ಸಮಾಜದಲ್ಲಿರುವ ದೊಡ್ಡ ಶಕ್ತಿ ಎಂದರು.

ಜನತೆಗೆ ಕೋವಿಡ್ ಉಚಿತ ಲಸಿಕೆಯನ್ನು ನೀಡುವುದರ ಮೂಲಕ ತಮ್ಮ ಕೋಟ್ಯಾಂತರ ರೂ.ಗಳನ್ನು ಎಸ್ಸೆಸ್ ಖರ್ಚು ಮಾಡಿ ದಾನ ಮಾಡಿದ್ದಾರೆ. ಅವರಲ್ಲಿರುವ ಮಾನವೀಯತೆಯ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ದೇವರಾಜ ಅರಸು ಬಡಾವಣೆ ಬಿ ಬ್ಲಾಕ್‌ನ ರೈಲ್ವೆ ಹಳಿಯ ಪಕ್ಕದಲ್ಲಿರುವ ನಿವೇಶನದಲ್ಲಿ ಸುಸಜ್ಜಿತವಾದ ಪಾರ್ಕನ್ನು ನಿರ್ಮಿಸುವಂತೆ ವೀರಪ್ಪ ಬಾವಿ ಅವರು ನಗರ ಪಾಲಿಕೆಯನ್ನು ಒತ್ತಾಯಿಸಿದರು.

ಬಸವ ಮಹಿಳಾ ಕೇಂದ್ರದ ಅಧ್ಯಕ್ಷೆ ಶ್ರೀಮತಿ ವೀಣಾ ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ನ್ಯಾಯವಾದಿ ಶ್ರೀಮತಿ ಸುಧಾ, ಶ್ರೀಮತಿ ಗಾಯಿತ್ರಮ್ಮ, ಶ್ರೀಮತಿ ಮಂಗಳ, ಶ್ರೀಮತಿ ಶಾಂತಮ್ಮ, ದ್ಯಾಮಮ್ಮ ಮತ್ತಿತರರು ಉಪಸ್ಥಿತರಿದ್ದರು.

## ರುದ್ರಭೂಮಿಯಲ್ಲಿ ಬರ್ನಿಂಗ್ ಘಟಕ ಸ್ಥಾಪಿಸಿ : ಬಿ.ಹೆಚ್. ವೀರಭದ್ರಪ್ಪ



ದಾವಣಗೆರೆ, ಜೂ.22- ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದ್ದರೂ ಸ್ಪಂದಿಸದ ಕಾರಣ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ವಿಭಾಗದ ಜಿಲ್ಲಾಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಎಚ್ಚರಿಸಿದ್ದಾರೆ.

ರುದ್ರಭೂಮಿಯಲ್ಲಿ ಬರ್ನಿಂಗ್ (ಸುಡುವುದು) ಘಟಕ ಸ್ಥಾಪನೆಗೆ ಮನವಿ ಸಲ್ಲಿಸಿದ್ದರೂ ಕ್ರಮ ಕೈಗೊಂಡಿಲ್ಲ. ಕೊರೊನಾ ಸಾವು ಹೆಚ್ಚುತ್ತಿರುವುದರಿಂದ ಕ್ರಮ ಕೈಗೊಳ್ಳಬೇಕು. ಗಾಂಧಿ ನಗರದ ಅಂಬೇಡ್ಕರ್ ಪಾರ್ಕ್‌ನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕಂಚಿನ ಪುತ್ಥಳಿ ನಿರ್ಮಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ವಿನೋಬನಗರ (ಪಿ.ಬಿ.ರಸ್ತೆಗೆ ಹೊಂದಿಕೊಂಡಿರುವ) ತೋಟಗಾರಿಕೆ ಇಲಾಖೆ ಜಾಗದಲ್ಲಾಗಲೀ ಅಥವಾ ಪಾಲಿಕೆ ಹಿಂಭಾಗದ ಚನ್ನಗಿರಿ ರಂಗಪ್ಪ ರಾಧಮ್ಮ ರಂಗ ಮಂದಿರ ತೆರವುಗೊಳಿಸಿ ಆ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಿಸುವಂತೆ ವೀರಭದ್ರಪ್ಪ ಒತ್ತಾಯಿಸಿದ್ದಾರೆ.

## ರೋಟರಿ ಕ್ಲಬ್ ವತಿಯಿಂದ ಸೋನೋ ಮ್ಯಾಮೋಗ್ರಫಿ ಘಟಕ

ದಾವಣಗೆರೆ, ಜೂ. 22 - ರೋಟರಿ ಕ್ಲಬ್ ನಿಂದ ನಗರದ ಸುಕ್ಷೇಮ ಆಸ್ಪತ್ರೆಯಲ್ಲಿ ಸೋನೋ ಮ್ಯಾಮೋಗ್ರಫಿ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಈ ಘಟಕದಿಂದ ಸ್ತ್ರೀಯರಲ್ಲಿ ಸ್ತನ ಕ್ಯಾನ್ಸರ್ ಪತ್ತೆ ಮಾಡಬಹುದಾಗಿದೆ. ಅಂತರರಾಷ್ಟ್ರೀಯ ರೋಟರಿ ಫೌಂಡೇಶನ್ ಹಾಗೂ ರೋಟರಿ ಜಿಲ್ಲೆಗಳಾದ 1385, 3150 ಮತ್ತು 3160 ಇವರ ಅನುದಾನದಲ್ಲಿ ಇದನ್ನು ಸ್ಥಾಪಿಸಲಾಗುತ್ತಿದ್ದು, ಶೀಘ್ರವೇ ಇದು ಕಾರ್ಯಾರಂಭ ಮಾಡಲಿದೆ ಎಂದು ಗ್ಲೋಬಲ್ ಗ್ರಾಂಟ್ ಕಮಿಟಿ ಛೇರ್ಮನ್ ಪಿ.ಬಿ. ಪ್ರಕಾಶ್ ತಿಳಿಸಿದ್ದಾರೆ.

ರೋಟರಿ ಕ್ಲಬ್ ದಾವಣಗೆರೆ ಆಶ್ರಯದಲ್ಲಿ ಸುಕ್ಷೇಮ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರಗಳನ್ನು ನಿಯತಕಾಲಿಕವಾಗಿ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಈ ಸೋನೋ ಮ್ಯಾಮೋಗ್ರಫಿ ಘಟಕವನ್ನು ಇದೇ ನಾಡಿದ್ದು ದಿನಾಂಕ 24ರ ಗುರುವಾರ ಬೆಳಿಗ್ಗೆ 9 ಗಂಟೆಗೆ ರೋಟರಿ 3160 ಜಿಲ್ಲೆಯ ಗವರ್ನರ್ ಬಿ.ಚೆನ್ನಪ್ಪ ರೆಡ್ಡಿ ಹಾಗೂ ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ. ಎಲ್. ನಾಗರಾಜ್ ಉದ್ಘಾಟಿಸಲಿದ್ದಾರೆ.

ರೋಟರಿ ಅಧ್ಯಕ್ಷ ಆರ್.ಟಿ. ಮೃತ್ಯುಂಜಯ ಅವರ ಅಧ್ಯಕ್ಷತೆಯಲ್ಲಿ ಸುಕ್ಷೇಮ ಆಸ್ಪತ್ರೆಯ ಆವರಣದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ರೋಟರಿ ಭಾವೀ ಗವರ್ನರ್ ತಿರುಪತಿ ನಾಯ್ಡು, ರೋಟರಿ ಗ್ಲೋಬಲ್ ಗ್ರ್ಯಾಂಟ್ ಕಮಿಟಿಯ ಸದಸ್ಯರುಗಳಾದ ಡಾ.ವಿ.ಎಲ್. ಜಯಸಿಂಹ, ಕೆ. ಮಧುಪ್ರಸಾದ್, ಹಿರಿಯರಾದ ಎಸ್.ಕೆ. ವೀರಣ್ಣ, ಆರ್.ಎಸ್. ನಾರಾಯಣಸ್ವಾಮಿ, ನಯನ್ ಪಾಟೀಲ್, ಎ.ಜಿ. ಚಂದ್ರಾಚಾರ್, ರೋಟರಿ ಕಾರ್ಯದರ್ಶಿ ಅಂದನೂರು ಆನಂದ್, ಖಜಾಂಚಿ ಜಗದೀಶ್ ಬೇತೂರು ಭಾಗವಹಿಸಲಿದ್ದಾರೆ.

ಸುಕ್ಷೇಮ ಆಸ್ಪತ್ರೆಯ ಡಾ. ಶ್ರೀಶೈಲ ಬ್ಯಾಡಗಿ ಹಾಗೂ ಕ್ಯಾನ್ಸರ್ ಸರ್ಜನ್ ಡಾ. ಸುನೀಲ್ ಬ್ಯಾಡಗಿ ಉಪಸ್ಥಿತರಿರುವರು.

# ಎಲ್ಲಾ ವಹಿವಾಟಿಗೆ ಅವಕಾಶ ನೀಡಿ



(1ನೇ ಪುಟದಿಂದ) ಸ್ವಲ್ಪ ಸಮಯದಲ್ಲೇ ಸರ್ಕಾರದಿಂದ ದಾವಣಗೆರೆ ಸೇರಿದಂತೆ 4 ಜಿಲ್ಲೆಗಳಿಗೆ ಅನ್ವಯವಾಗುವಂತೆ ಬೆಳಿಗ್ಗೆ 6 ರಿಂದ ಮಧ್ಯಾಹ್ನ 1 ರವರೆಗೆ ಮಾತ್ರ ಎಲ್ಲಾ ರೀತಿಯ ಅಂಗಡಿ-ಮುಂಗಟ್ಟು ತೆರೆಯಲು ಅವಕಾಶ ನೀಡಿರುವುದಾಗಿ ಆದೇಶ ಬಂದಿದೆ.

ಈ ಸಂದರ್ಭದಲ್ಲಿ ವರ್ತಕರುಗಳಾದ ಬಿ.ಸಿ. ಉಮಾಪತಿ, ಜಾವೀದ್ ಸಾಬ್, ವಿಜಯ್ ಎಸ್. ಜೈನ್, ಜೆ.ಹೆಚ್. ರಮೇಶ್, ಸುರೇಶ್ ಕುಮಾರ್, ಮಹೇಂದ್ರ, ಕಾಂತಿಲಾಲ್, ವಸಂತಕುಮಾರ್, ಕವಿತಾ ಚಂದ್ರಶೇಖರ್ ಮತ್ತಿತರರಿದ್ದರು.

## ಅಂಗಡಿಗಳಿಗೆ ಅನುಮತಿ

(1ನೇ ಪುಟದಿಂದ) ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಅನುಮತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ವಿಪತ್ತು ನಿರ್ವಹಣಾ ಉನ್ನತ ಸಮಿತಿ ಈ ಮಹತ್ವದ ತೀರ್ಮಾನ ಕೈಗೊಂಡಿದ್ದು, ಜುಲೈ 5ರ ಬೆಳಗ್ಗೆ 5 ಗಂಟೆವರೆಗೆ ಈ ಆದೇಶ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ.

# ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಪ್ರಾತ್ಯಕ್ಷಿಕೆ




ಅಗಸನಕಟ್ಟೆ

ದಾವಣಗೆರೆ, ಜೂ.22 - ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ದಾವಣಗೆರೆ ತಾಲ್ಲೂಕಿನ ಅಗಸನಕಟ್ಟೆ ಗ್ರಾಮದಲ್ಲಿ ತೊಗರಿಯನ್ನು ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ಮುಂಚೂಣಿ ಪ್ರಾತ್ಯಕ್ಷಿಕೆಯು ಮೊನ್ನೆ ನಡೆಯಿತು.

ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ಮೆಕ್ಕೆಜೋಳವನ್ನು ಏಕ ಬೆಳೆಯಾಗಿ ಬೆಳೆಯುವುದರಿಂದ ರೈತರಿಗೆ ಆರ್ಥಿಕ ನಷ್ಟ ಉಂಟಾಗಬಹುದು. ಕಾರಣ ಮೆಕ್ಕೆಜೋಳಕ್ಕೆ ಬರುವ ಕೀಟ ಮತ್ತು ರೋಗಗಳ ಬಾಧೆ, ಹಾಗೂ ಸರಿಯಾದ ಸಮಯಕ್ಕೆ ಮಳೆ ಬರದೆ ಇದ್ದರೆ ಇಳುವರಿಯಲ್ಲಿ ಕುಂಠಿತವಾಗುತ್ತದೆ. ಈ ಕಾರಣದಿಂದ ಮೆಕ್ಕೆಜೋಳದಲ್ಲಿ ತೊಗರಿಯನ್ನು ಅಂತರ ಬೆಳೆಯಾಗಿ ಬೆಳೆಯುವುದು ಸೂಕ್ತ. (6:1). ತೊಗರಿ ಬೆಳೆಯನ್ನು ಹಾಕುವುದರಿಂದ ಮಣ್ಣಿನ ಫಲವತ್ತತೆ ಕಾಪಾಡುವುದರ ಜೊತೆಗೆ ಇಳುವರಿ ಸಿಗುತ್ತದೆ. ತೊಗರಿಯಲ್ಲಿ ನವೀನ ತಳಿಗಳಾದ ಟಿ.ಎಸ್. -3R ಹಾಗೂ ಬಿಆರ್‌ಜಿ-5 ಬೆಳೆಯಬಹುದು ಎಂದರು.

ಮಣ್ಣು ವಿಜ್ಞಾನಿಗಳಾದ ಸಣ್ಣಗೌಡರು ಮಾತನಾಡುತ್ತಾ ಜೈವಿಕ ಗೊಬ್ಬರಗಳಾದ ರೈಜೋಬಿಯಂ ಹಾಗೂ PSB 500 ಗ್ರಾಂ ಪ್ರತಿ ಎಕರೆ ಬೀಜಕ್ಕೆ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ಶಿಫಾರಸ್ಸು ಮಾಡಿದ ಸಾರಜನಕದಲ್ಲಿ ಶೇಕಡ 10% ಕಡಿಮೆ ಮಾಡಬಹುದು ಎಂದು ಮಾಹಿತಿ ಒದಗಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರದ ವಿಸ್ತರಣಾ ತಜ್ಞ ರಘುರಾಜ್ ಮತ್ತಿತರರು ಭಾಗವಹಿಸಿದ್ದರು.

# ಲಸಿಕೆ, ವೈರಸ್‌ನಿಂದ ರಕ್ಷಿಸುವ ಸಾಧನ

## ಉಚ್ಚಂಗಿದುರ್ಗದ ಕಾರ್ಯಕ್ರಮದಲ್ಲಿ ಶಾಸಕ ಎಸ್.ವಿ. ರಾಮಚಂದ್ರ



ಹರಪನಹಳ್ಳಿ, ಜೂ.22- ಕೊರೊನಾ ವೈರಸ್ ಎರಡನೇ ಅಲೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, 3ನೇ ಅಲೆಯ ಕುರಿತು ಎಚ್ಚರಿಕೆ ವಹಿಸುವಂತೆ ತಜ್ಞರು ಎಚ್ಚರಿಕೆ ನೀಡುತ್ತಿದ್ದಾರೆ. ಕೊರೊನಾ ವೈರಸ್‌ನಿಂದ ತಪ್ಪಿಸಿಕೊಳ್ಳಲು ಲಸಿಕೆಯೊಂದೇ ಏಕೈಕ ಮಾರ್ಗವಾಗಿದೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ತಾಲ್ಲೂಕಿನ ಉಚ್ಚಂಗಿದುರ್ಗದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ನಿರೋಧಕ ಲಸಿಕೆ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.


ಗ್ರಾಮೀಣ ಪ್ರದೇಶದ ಜನರು ಮೂಢನಂಬಿಕೆ. ಮೌಢ್ಯಕ್ಕೆ ಬಲಿಯಾಗದೆ ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಪ್ರಾಣವನ್ನು ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಮಮತ ಸಿದ್ಧನಗೌಡ್ರು, ಉಪಾಧ್ಯಕ್ಷರಾದ ಕಾಳಮ್ಮ, ತಾಲ್ಲೂಕು ಪಂಚಾಯ್ತಿ ಸ್ಥಾಯಿ ಸಮಿತಿ ಅಧ್ಯಕ್ಷ ಪಟೇಲ್ ಕೆಂಚನಗೌಡ, ಆರೋಗ್ಯಾಧಿಕಾರಿ ಅರವಿಂದ, ಮುಖಂಡರಾದ ಹನುಮಂತಪ್ಪ, ಕೆಂಚಪ್ಪ, ಯುವರಾಜ, ಪ್ರಕಾಶ್ ಇನ್ನಿತರರಿದ್ದರು.

## ವಿನೋಬನಗರದಲ್ಲಿ ಇಂದು ಕೋವಿಡ್ ಉಚಿತ ಲಸಿಕಾ ಶಿಬಿರ

ಕೋವಿಡ್ - 19 ಉಚಿತ ಲಸಿಕಾ ಶಿಬಿರವು ನಗರ ಪಾಲಿಕೆಯ 16ನೇ ವಾರ್ಡಿನ ವಿನೋಬನಗರ 1ನೇ ಮುಖ್ಯ ರಸ್ತೆಯ ಶ್ರೀ ಮುರುಘರಾಜೇಂದ್ರ ಶಾಲೆಯಲ್ಲಿ ಇಂದು ನಡೆಯಲಿದೆ. 45 ವರ್ಷ ಮೇಲ್ಪಟ್ಟವರು ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಈ ವಾರ್ಡಿನ ನಗರ ಪಾಲಿಕೆ ಸದಸ್ಯರೂ ಆದ ಪಾಲಿಕೆಯ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಕೋರಿದ್ದಾರೆ.

# ಅಪಘಾತದಲ್ಲಿ ಮೃತಪಟ್ಟ ಕುಟುಂಬಕ್ಕೆ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕಿನಿಂದ ವಿಮೆ ಪರಿಹಾರ



ದಾವಣಗೆರೆ, ಜೂ.22- ಈಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸದಸ್ಯರಾದ ಶ್ರೀಮತಿ ಸಿದ್ದಲಿಂಗಮ್ಮ ಅವರ ಕುಟುಂಬಕ್ಕೆ ಬ್ಯಾಂಕ್ ವತಿಯಿಂದ 1 ಲಕ್ಷ ರೂ.ಗಳ ಅಪಘಾತ ವಿಮೆ ನೀಡಲಾಯಿತು. ಮೃತ ಸಿದ್ದಲಿಂಗಮ್ಮ ಅವರ ಪುತ್ರ ರುದ್ರೇಶ್ ಅವರಿಗೆ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ಅಪಘಾತ ವಿಮೆಯ ಚೆಕ್ ವಿತರಿಸಿದರು. ಉಪಾಧ್ಯಕ್ಷ ಎಸ್.ಕೆ. ವೀರಣ್ಣ, ಹಿರಿಯ ನಿರ್ದೇಶಕ ರಮಣಲಾಲ್ ಪಿ. ಸಂಘವಿ, ಪ್ರಧಾನ ವ್ಯವಸ್ಥಾಪಕ ಎಂ. ಶಿವಲಿಂಗಸ್ವಾಮಿ ಉಪಸ್ಥಿತರಿದ್ದರು.

ಸಿದ್ದಲಿಂಗಮ್ಮ ಅವರು ತನ್ನ ಮಗಳ ಮದುವೆಯ ಆಮಂತ್ರಣವನ್ನು ಕೊಡಲೆಂದು ಮೋಟಾರ್ ಬೈಕಿನಲ್ಲಿ ಕೊಟ್ಟೂರಿಗೆ ಹೋಗುತ್ತಿದ್ದ ಸಂದರ್ಭದಲ್ಲಿ ರಸ್ತೆ ಅಪಘಾತಕ್ಕೀಡಾಗಿ ಸಾವಿಗೀಡಾಗಿದ್ದರು. ಮದುವೆ ಕೇವಲ 5 ದಿನ ಉಳಿದಾಗ ಈ ದುರಂತ ನಡೆದಿತ್ತು.

## ನಗರಕ್ಕೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ

ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಅವರು ಇಂದು ಮತ್ತು ನಾಳೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಸಂಜೆ 7 ಗಂಟೆಗೆ ನಗರಕ್ಕೆ ಆಗಮಿಸಿ, ವಾಸ್ತವ್ಯ ಮಾಡುವರು. ನಾಳೆ ಗುರುವಾರ ಬೆಳಿಗ್ಗೆ 9 ಗಂಟೆಗೆ ಪೌರ ಕಾರ್ಮಿಕ ಮುಖಂಡರೊಂದಿಗೆ ಚರ್ಚೆ ನಡೆಸುವರು. ನಂತರ 10.30ಕ್ಕೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ-2013ರ ಅನುಷ್ಠಾನದ ಬಗ್ಗೆ ಆನ್‌ಲೈನ್ ತರಬೇತಿಯಲ್ಲಿ ಪಾಲ್ಗೊಳ್ಳುವರು. ನಂತರ ಬೆಳಿಗ್ಗೆ 11.15 ಕ್ಕೆ ಸಫಾಯಿ ಕರ್ಮಚಾರಿಗಳ ಕುಂದು-ಕೊರತೆಗಳ ಬಗ್ಗೆ ಸಭೆ ನಡೆಸಲಾಗುವುದು.

# ಕೋವಿಡ್ ಸಾವಿನ ಸಂಖ್ಯೆ ಮರೆಮಾಚುತ್ತಿರುವ ಜಿಲ್ಲಾಡಳಿತ : ಡಿಬಿ ಆರೋಪ

ದಾವಣಗೆರೆ, ಜೂ.22- ಕೊರೊನಾದಿಂದ ಮೃತಪಟ್ಟವರ ನಿಖರವಾದ ಸಂಖ್ಯೆಯನ್ನು ತಿಳಿಸದೇ ಜಿಲ್ಲಾಡಳಿತ ಮರೆಮಾಚಿ ಸುಳ್ಳು ಲೆಕ್ಕ ಕೊಡುತ್ತಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆರೋಪಿಸಿದ್ದಾರೆ.

ನಿನ್ನೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಆಡಳಿತ ವಿಫಲತೆ ಯಿಂದಾಗಿ ಆಸ್ಪತ್ರೆಗಳಲ್ಲಿ ಬೆಡ್‌ಗಳು, ಆಕ್ಸಿಜನ್, ವೆಂಟಿಲೇಟರ್‌ಗಳು ಹಾಗೂ ಸರಿಯಾದ ಔಷಧೋಪಚಾರಗಳು ಸಿಗದೇ ಬಡ ಜನರು ಲಕ್ಷಾಂತರ ಸಂಖ್ಯೆಯಲ್ಲಿ ಹಾದಿ ಬೀದಿಗಳಲ್ಲಿ ಸಾವನ್ನಪ್ಪುತ್ತಿದ್ದಾರೆ ಎಂದು ತಿಳಿಸಿದರು.

ಕೋವಿಡ್ ಸಾವಿನ ಬಗ್ಗೆ ನಿಖರ ಲೆಕ್ಕ ಸಿಗಬೇಕಾದರೆ ಹೈಕೋರ್ಟ್ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ ಅವರು, ಕೋವಿಡ್‌ನಿಂದ ಮೃತಪಟ್ಟ ಪ್ರತಿಯೊಬ್ಬ ಕುಟುಂಬದವರಿಗೂ ತಲಾ 5 ಲಕ್ಷ ರೂ. ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ಸುಪ್ರೀಂ ಕೋರ್ಟ್ ಸಹ ಕೋವಿಡ್‌ನಿಂದ ಸಾವನ್ನಪ್ಪಿದ ಕುಟುಂಬದ ಸದಸ್ಯರಿಗೆ ವಿಪತ್ತು ನಿರ್ವಹಣೆ ಕಾಯ್ದೆ 2005 ರ ಅಡಿ ಪ್ರತಿ ವ್ಯಕ್ತಿಗೂ 4 ಲಕ್ಷಕ್ಕೂ ಹೆಚ್ಚು ಪರಿಹಾರ ನೀಡುವ ವಿಚಾರವಾಗಿ ಸಲ್ಲಿಕೆಯಾದ ಎರಡು ಅರ್ಜಿಗಳ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚನೆ ನೀಡಿದೆ. ಆದರೆ ಈ ಬಗ್ಗೆ ಕೋವಿಡ್‌ನಿಂದ ಮೃತರಾದವರಿಗೆ ಮರಣ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಗೆ ಏಕರೂಪ ನೀತಿಯನ್ನು ಪ್ರಕಟಿಸಲು ಸುಪ್ರೀಂ ಕೋರ್ಟ್ ಸೂಚಿಸಿದೆ ಎಂದು ಮಾಹಿತಿ ನೀಡಿದರು. ಕೋವಿಡ್ ಲಕ್ಷಣಗಳಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದ ನಂತರ ಸಾವನ್ನಪ್ಪಿದ್ದರೆ ಅವರಿಗೂ ಪರಿಹಾರ ನೀಡುವಂತೆ ಆಗ್ರಹಿಸಿದರು.

**ಲಸಿಕೆ ನೀಡುವಲ್ಲಿ ತಾರತಮ್ಯ ಬೇಡ :** ಸರ್ಕಾರದ ವತಿಯಿಂದ ನೀಡುವ ಲಸಿಕೆಯಲ್ಲಿ ತಾರತಮ್ಯ ಮಾಡದೇ ಪ್ರತಿಯೊಬ್ಬರಿಗೂ ನೀಡಬೇಕು. ನಗರ ಸ್ವಚ್ಛತೆ ಕಡೆ ಪಾಲಿಕೆ ಗಮನಹರಿಸಬೇಕಾಗಿದೆ ಎಂದರು. ಇಂಡಸ್ಟ್ರಿಯಲ್ ಆಕ್ಸಿಜನ್ ನೀಡುವ ಬದಲು ಲಿಕ್ವಿಡ್ ಆಕ್ಸಿಜನ್ ನೀಡುವಂತೆ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಕೆ. ಚಮನ್‌ಸಾಬ್, ಅಬ್ದುಲ್ ಲತೀಫ್, ಕಾಂಗ್ರೆಸ್ ಮುಖಂಡರುಗಳಾದ ಗಣೇಶ್ ಹುಲ್ಮನಿ, ಹೆಚ್. ಸುಭಾನ್, ಕೆ.ಎಂ. ಮಂಜುನಾಥ್, ಡಿ. ಶಿವಕುಮಾರ್ ಉಪಸ್ಥಿತರಿದ್ದರು.

WANTED
OFFICE MANAGER
FOR EICHER TRACTOR DEALERSHIP
JOB: Profile: Office Management, Store & inventory, Accounts, New Branch Co-ordination, Vehicle documentation, Service Control
Expirence: above 4 Years
Age: above 35 years
Salary: Best of the Industry
candidates can submit Biodata at office or by Email
sharadaautosdavangere@gmail.com
Address: Sharada Autos
Ganesh Layout, Behind Ananda Residency, Near KSRTC Bus Stand, Davanagere. 96864 18904

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ದಾವಣಗೆರೆ
ಲೋಕಿಕೆರೆ ರಸ್ತೆ, ದೂರದರ್ಶನ ಕೇಂದ್ರದ ಎದುರು, ದಾವಣಗೆರೆ
ಫೋನ್ ನಂಬರ್: 08192-261485, 261825, 260016
Email:-zpdvg@yahoo.co.in web:www.zpdavangere.kar.nic.in
ಸಂಖ್ಯೆ:ಅದಾಕಾ/ಟೆಂಡರ್/ಹೊ.ಗು.ಸಿ/07/2021-22
ದಿನಾಂಕ:16.06.2021
ಟೆಂಡರ್ ಪ್ರಕಟಣೆ
2021-22ನೇ ಸಾಲಿಗೆ ಅಕ್ಷರ ದಾಸೋಹ ಕಾರ್ಯಕ್ರಮದಡಿ, ಅಂಕಿ ಅಂಶಗಳ ಕ್ರೋಢೀಕರಣ ಮತ್ತು ನಿಖರತೆ ಕಾಯ್ದುಕೊಳ್ಳಲು ಹಾಗೂ ಅಂತರ್ಜಾಲದಲ್ಲಿ ಅಂಕಿ ಅಂಶಗಳ ಗಣಕೀಕರಣಗೊಳಿಸಲು ಹೆಚ್ಚಿನ ಮಾನವ ಸಂಪನ್ಮೂಲ ಅಗತ್ಯತೆ ಇದ್ದು ಜಿಲ್ಲಾ ಪಂಚಾಯತ್ ಅಕ್ಷರ ದಾಸೋಹ ವಿಭಾಗಕ್ಕೆ ಒಬ್ಬರು ಡಾಟಾ ಎಂಟ್ರಿ ಆಪರೇಟರ್ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಟೆಂಡರ್‌ದಾರರಿಂದ ಟೆಂಡರ್ ಕರೆಯಲಾಗಿದೆ. ಆಸಕ್ತ ಟೆಂಡರ್‌ದಾರರು ಅರ್ಜಿ ಫಾರಂಗಳನ್ನು ದಿನಾಂಕ: 21.06.2021 ರಿಂದ 20.07.2021 ರವರೆಗೆ ಅರ್ಜಿ ಶುಲ್ಕ ರೂ. 500/-ಗಳ ಡಿಡಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ರವರ ಹೆಸರಿಗೆ ನೀಡಿ ಅರ್ಜಿಯನ್ನು ಶಿಕ್ಷಣಾಧಿಕಾರಿಗಳು, ಅಕ್ಷರದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯತ್, ದಾವಣಗೆರೆ ರವರನ್ನು ಸಂಪರ್ಕಿಸಿ ಪಡೆಯಬಹುದು.
* ಷರತ್ತುಗಳು ಅನ್ವಯಿಸುತ್ತವೆ.
ಸಹಿ/-
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್ ದಾವಣಗೆರೆ.
ವಾಸಾಇ/ದಾವಣಗೆರೆ/171/ ಎಂಸಿಎ/2020-21




**ಸಸಿ ಮಡಿ**

ಭದ್ರಾ ಅಚ್ಚುಕಟ್ಟಿನಲ್ಲಿ ಭತ್ತದ ಕಟಾವು ಬಹುತೇಕ ಮುಗಿದಿದ್ದು, ರೈತರು ಈಗ ಮುಂಗಾರು ಹಂಗಾಮಿನ ನಾಟಿಗಾಗಿ ಭತ್ತದ ಸಸಿ ಮಡಿ ಬೆಳೆಸಲು ಮಿಟ್ಲಕಟ್ಟೆ ಸಮೀಪ ಮಂಗಳವಾರ ಬೀಜ ಚೆಲ್ಲಿದರು.

# ಪವಾರ್ ಮನೆಯಲ್ಲಿ ಪ್ರಾಂತೀಯ ಪಕ್ಷಗಳ ಸಭೆ

**ಬಿಜೆಪಿ ವಿರುದ್ಧ ಸಂಘಟನೆಯ ಸೂಚನೆ**


ನವದೆಹಲಿ ಜೂ. 22 – ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಅವರು ತಮ್ಮ ಮನೆಯಲ್ಲಿ ಬಿಜೆಪಿ ವಿರೋಧಿಸುವ ಪಕ್ಷಗಳ ನಾಯಕರ ಸಭೆ ಕರೆದಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ. ಬಿಜೆಪಿ ವಿರುದ್ಧ ಪ್ರಬಲ ಸಂಘಟನೆ ರೂಪಿಸಲು ಪವಾರ್ ಪ್ರಯತ್ನ ನಡೆಸಿದ್ದಾರೆ ಎನ್ನಲಾಗುತ್ತಿದೆ

ಹಲವಾರು ಪ್ರಾಂತೀಯ ಪಕ್ಷಗಳ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಪವಾರ್ ಮೊನ್ನೆಯಷ್ಟೇ ರಾಜಕೀಯ ತಂತ್ರಗಾರ ಪ್ರಶಾಂತ್ ಕಿಶೋರ್ ಜೊತೆ ಚರ್ಚೆ ನಡೆಸಿದ್ದರು.

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ತೃಣಮೂಲ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿತ್ತು. ಇದರಿಂದಾಗಿ ಬಿಜೆಪಿಗೆ ತೀವ್ರ ಹಿನ್ನಡೆಯಾಗಿದೆ.

ತಮಿಳುನಾಡು ಹಾಗೂ ಕೇರಳಗಳಲ್ಲೂ ಬಿಜೆಪಿ ಹಿನ್ನಡೆ ಕಂಡಿದೆ. ಮತ್ತೊಂದೆಡೆ ರಾಷ್ಟ್ರೀಯ ಪ್ರತಿಪಕ್ಷವಾಗಿರುವ ಕಾಂಗ್ರೆಸ್ ಚೇತರಿಕೆಯ ಯಾವುದೇ ಲಕ್ಷಣ ತೋರುತ್ತಿಲ್ಲ. ಅಸ್ಸಾಂನಲ್ಲಿ ಬಿಜೆಪಿ ಎದುರು ಸೋತಿರುವ ಪಕ್ಷ, ಕೇರಳದಲ್ಲಿ ಉತ್ತಮ ಸಾಧನೆ ತೋರಲು ವಿಫಲವಾಗಿದೆ.

ಮುಂದಿನ ವರ್ಷ ಉತ್ತರ ಪ್ರದೇಶ ಹಾಗೂ ಪಂಜಾಬ್ ಸೇರಿದಂತೆ ಹಲವು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ 2024ರ ಲೋಕಸಭಾ ಚುನಾವಣೆ ಗುರಿಯಲ್ಲಿಟ್ಟುಕೊಂಡು ಪ್ರಾಂತೀಯ



ಬಿಜೆಪಿಯೇತರ ಪಕ್ಷಗಳನ್ನು ಜೊತೆಯಾಗಿಸಿಕೊಳ್ಳಲು ಪವಾರ್ ಪ್ರಯತ್ನ ನಡೆಸುತ್ತಿದ್ದಾರೆ ಎನ್ನಲಾಗಿದೆ.

ಬಿಜೆಪಿ 2014ರಲ್ಲಿ ಕೇಂದ್ರ ದಲ್ಲಿ ಅಧಿಕಾರಕ್ಕೆ ಬಂದ ನಂತರದಿಂದಲೂ, ಅದರ ವಿರುದ್ಧ ಕಾಂಗ್ರೆಸ್‌ಗಿಂತ ಪ್ರಾಂತೀಯ ಪಕ್ಷಗಳೇ ಉತ್ತಮ ಸಾಧನೆ ತೋರುತ್ತಿವೆ.

ಸಭೆಯ ನಂತರ ಮಾತನಾಡಿರುವ ಸಿಪಿಐ (ಎಂ)ನ ನಿಲೋತ್‌ಪಾಲ್ ಬಸು, ಸಭೆಯಲ್ಲಿ ಕೊರೊನಾ ನಿರ್ವಹಣೆ, ನಿರುದ್ಯೋಗ ಹಾಗೂ ಬಿಜೆಪಿ ಸಂಸ್ಥೆಗಳ ಮೇಲೆ ನಡೆಸುತ್ತಿರುವ ದಾಳಿಗಳ ಕುರಿತು ಚರ್ಚಿಸಲಾಯಿತು. ಈ ಸಭೆ ರಾಜಕೀಯ ಮಹತ್ವ ಪಡೆದಿಲ್ಲ ಎಂದಿದ್ದಾರೆ.

ಸಮಾಜವಾದಿ ಪಕ್ಷದ ಘನಶ್ಯಾಮ್ ತಿವಾರಿ, ತೃಣಮೂಲ ಕಾಂಗ್ರೆಸ್ ಉಪಾಧ್ಯಕ್ಷ ಯಶವಂತ್ ಸಿನ್ಹ, ಆರ್.ಎಲ್.ಡಿ.ಯ ಜಯಂತ್ ಚೌಧರಿ, ನ್ಯಾಷನಲ್ ಕಾನ್ಫರೆನ್ಸ್‌ನ ಓಮರ್ ಅಬ್ದುಲ್ಲಾ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

ರಾಜಕೀಯ ಪಕ್ಷಗಳಿಗೆ ಸೇರಿರದ. ಆದರೆ ಬಿಜೆಪಿ ವಿರೋಧಿ ನಿಲುವು ಹೊಂದಿರುವ ಗೀತ ರಚನೆಕಾರ ಜಾವಿದ್ ಅಖ್ತರ್ ಹಾಗೂ ಮಾಜಿ ರಾಯಭಾರಿ ಕೆ.ಸಿ. ಸಿಂಗ್ ಅವರೂ ಸಭೆಯಲ್ಲಿ ಭಾಗವಹಿಸಿದ್ದರು. ಕೆಲ ಕಾಂಗ್ರೆಸ್ ನಾಯಕರಿಗೆ ಆಹ್ವಾನ ನೀಡ ಲಾಗಿತ್ತು. ಆದರೆ, ಅವರಾರೂ ಸಭೆಯಲ್ಲಿ ಭಾಗ ವಹಿಸಿರಲಿಲ್ಲ. ಇದು ಪ್ರಾಂತೀಯ ಪಕ್ಷಗಳ ನಾಯಕತ್ವದ ಗುಂಪಿನಲ್ಲಿ ತೋರಿಸಿಕೊಳ್ಳಲು ಕಾಂಗ್ರೆಸ್ ಬಯಸುವುದಿಲ್ಲ ಎಂಬ ಸೂಚನೆ ನೀಡಿದೆ.

# ಬದಲಾದ ಪರೀಕ್ಷೆ : ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ

ಹರಿಹರ, ಜೂ.22- ಕೋವಿಡ್ ಕಾರಣದಿಂದ ಬದಲಾಗಿರುವ ಎಸ್ಸೆಸ್ಸೆಲ್ಸಿ ಪರೀಕ್ಷಾ ಪದ್ಧತಿ ಬಗ್ಗೆ ವಿದ್ಯಾರ್ಥಿಗಳಲ್ಲಿ ಪ್ರೌಢಶಾಲಾ ಶಿಕ್ಷಕರು ಜಾಗೃತಿ ಮೂಡಿಸಬೇಕೆಂದು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಎಚ್. ಮಂಜುನಾಥ್ ಹೇಳಿದರು.

ನಗರದ ಬಿಇಒ ಕಚೇರಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಲಾಕ್‌ಡೌನ್ ಕಾರಣದಿಂದ ವಿದ್ಯಾರ್ಥಿಗಳು ನೇರವಾಗಿ ಶಾಲಾ ಪಾಠ, ಪ್ರವಚನಗಳಲ್ಲಿ ಭಾಗವಹಿಸಲಾಗಿಲ್ಲ. ಆನ್‌ಲೈನ್ ಮೂಲಕ ಗರಿಷ್ಠ ಪ್ರಮಾಣದಲ್ಲಿ ಪಾಠ ಪ್ರವಚನ ಮಾಡಲಾಗಿದೆ. ಇಲಾಖೆಯ ಅಧಿಕಾರಿಗಳು, ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ತಿಳುವಳಿಕೆ ಹೊಂದಿ, ವಿದ್ಯಾರ್ಥಿಗಳಿಗೂ ಪರಿಚಯ ಮಾಡಿಕೊಡಬೇಕು.

ಒಎಂಆರ್ ಶೀಟ್ ತುಂಬುವುದು, ಪ್ರಶ್ನೆ ಪತ್ರಿಕೆ, ಉತ್ತರ ಬರೆಯುವ ಬಗ್ಗೆ ತಿಳುವಳಿಕೆ



**ಹರಿಹರ**

**ಅಕ್ಷರ ದಾಸೋಹದ 132 ದಿನಗಳ ಬಾಬ್ತು ಪ್ರತಿ ವಿದ್ಯಾರ್ಥಿಗೆ 8.600 ಕೆ.ಜಿ. ಬೇಳೆ, 2 ಲೀ. ಗೋಲ್ಡ್ ವಿನ್ನರ್ ಅಡುಗೆ ಎಣ್ಣೆ ವಿತರಣಾ ಪ್ರಕ್ರಿಯೆಗೆ ಚಾಲನೆ ನೀಡಿದ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಎಚ್. ಮಂಜುನಾಥ್**

ನೀಡಬೇಕು. ಆತಂಕ ಇಲ್ಲದೆ ಪರೀಕ್ಷೆಯನ್ನು ವಿದ್ಯಾರ್ಥಿಗಳು ಬರೆಯುವಂತೆ ಸಿದ್ಧಗೊಳಿಸಬೇಕು. ಈ ದಿಸೆಯಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕಿದೆ ಎಂದು ಕರೆ ನೀಡಿದರು.

ನಗರದಲ್ಲಿ 6, ಗ್ರಾಮೀಣ ಭಾಗದಲ್ಲಿ 11 ಸೇರಿದಂತೆ ತಾಲ್ಲೂಕಿನಲ್ಲಿ ಒಟ್ಟು 17 ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿವೆ. 3016 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ಪಾಲನೆ ಮಾಡಬೇಕು. ಶೌಚಾಲಯ, ಕುಡಿಯುವ ನೀರು ಸೇರಿದಂತೆ ಸೌಲಭ್ಯಗಳನ್ನು ರೂಪಿಸಬೇಕೆಂದರು.

2021-22ನೇ ಶೈಕ್ಷಣಿಕ ಸಾಲಿನ ಮಕ್ಕಳ ದಾಖಲಾತಿ ಬಗ್ಗೆ ಪ್ರಸ್ತಾಪಿಸಿದ ಅವರು, ದೂರದ ವಸತಿಯುತ ಶಾಲೆಗಳಿಗೆ ಕಳಿಸಲು ಪೋಷಕರು ಹಿಂದೇಟು ಹಾಕುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಈ ಬಾರಿ ದಾಖಲಾತಿ ಸಂಖ್ಯೆ ಹೆಚ್ಚಾಗಲಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸೌಲಭ್ಯಗಳನ್ನು ರೂಪಿಸಿ, ಶಿಕ್ಷಣ ನೀಡುವ ಜವಾಬ್ದಾರಿ ಇದೆ ಎಂದು ಹೇಳಿದರು.

ಬಿಇಒ ಯು. ಬಸವರಾಜಪ್ಪ, ಜಿಲ್ಲಾ ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಪುಷ್ಪಲತಾ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಿವಶಂಕರ್, ಪಿ. ರಾಮಕೃಷ್ಣ, ಡಿಆರ್‌ಎಂ ಪ್ರೌಢಶಾಲೆ ಉಪ ಪ್ರಾಚಾರ್ಯ ಸಿದ್ಧರಾಮೇಶ್ವರ್, ಸಿಆರ್‌ಪಿ ರೇವಣ್ಣ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ ಕುಮಾರ್ ಹೆಗಡೆ ಇತರರಿದ್ದರು.

# ಜಿ.ಎಂ. ಟ್ರಸ್ಟ್‌ನ ಮೊದಲ ಆಮ್ಲಜನಕ ಜನರೇಟರ್



**ಹರಿಹರ**

ಹರಿಹರ, ಜೂ.22- ಜಿ.ಮಲ್ಲಿಕಾರ್ಜುನಪ್ಪ ಶ್ರೀಮತಿ ಹಾಲಮ್ಮ ಟ್ರಸ್ಟ್ ವತಿಯಿಂದ 1.80 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆ ಮಾಡಲುದ್ದೇಶಿಸಿರುವ ಮೂರು ಆಮ್ಲಜನಕ ಜನರೇಟರ್‌ಗಳ ಪೈಕಿ 330 ಲೀ/ಮಿನಿಟ್ ಸಾಮರ್ಥ್ಯದ ಮೊದಲ ಆಮ್ಲಜನಕ ಜನರೇಟರನ್ನು ಮಂಗಳವಾರ ನಗರಕ್ಕೆ ತರಲಾಯಿತು.

ಈಗಾಗಲೇ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಜನರೇಟರ್ ಜೋಡಿಸುವ ಕಾರ್ಯ ಒಂದೆರಡು ದಿನಗಳಲ್ಲಿ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ. ಸಂಸದ ಜಿ.ಎಂ.ಸಿದ್ದೇಶ್ವರ ಹರಿಹರದ ಆಸ್ಪತ್ರೆ ಆವರಣಕ್ಕೆ ತೆರಳಿ ನೂತನ ಜನರೇಟರ್ ವೀಕ್ಷಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಹರಿಹರ ತಹಶೀಲ್ದಾರ್ ರಾಮಚಂದ್ರಪ್ಪ, ಜಿ.ಎಲ್.ರಾಜೀವ್, ಆಸ್ಪತ್ರೆಯ ವೈದ್ಯಾಧಿಕಾರಿಗಳು, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ರವಿಕುಮಾರ್ ಇತರರು ಉಪಸ್ಥಿತರಿದ್ದರು.

# ತೆರಿಗೆ ರಿಯಾಯಿತಿ ಜು.31 ರವರೆಗೆ ವಿಸ್ತರಣೆ

ದಾವಣಗೆರೆ, ಜೂ.22- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮೇಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಪಾವತಿಸಲು ಶೇ.5 ರಷ್ಟು ರಿಯಾಯಿತಿಯ ಕಾಲಾವಧಿಯನ್ನು ವಿಸ್ತರಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕ ರೋಗದ ಎರಡನೆ ಅಲೆಯ ಹಿನ್ನೆಲೆಯಲ್ಲಿ ಸಾರ್ವಜನಿಕರಿಗಾದ ತೊಂದರೆಯ ಕಾರಣದಿಂದ ಆಸ್ತಿ ತೆರಿಗೆ ಮೇಲಿನ ಶೇ.5 ರಿಯಾಯಿತಿಯನ್ನು ಸರ್ಕಾರದ ಆದೇಶದಂತೆ ಬರುವ ಜುಲೈ 31 ರವರೆಗೆ ವಿಸ್ತರಿಸಲಾಗಿದೆ ಎಂದು ಮಹಾನಗರಪಾಲಿಕೆಯ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

# ನೈಸ್‌ಗೆ 2 ಕೋಟಿ ರೂ. ಪರಿಹಾರ ನೀಡಲು ದೇವೇಗೌಡರಿಗೆ ಆದೇಶ

ಬೆಂಗಳೂರು, ಜೂ. 22 - ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ನೈಸ್) ಕಂಪನಿ ವಿರುದ್ಧ ಮಾಡಿದ್ದ ಆರೋಪ ಸಾಬೀತುಪಡಿಸುವಲ್ಲಿ ವಿಫಲರಾದ ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡ ಅವರು, ಕಂಪನಿಗೆ 2 ಕೋಟಿ ರೂ. ಪರಿಹಾರ ನೀಡಬೇಕೆಂದು ಬೆಂಗಳೂರು ಸಿಟಿ ಸಿವಿಲ್ ಕೋರ್ಟ್ ಆದೇಶಿಸಿದೆ. ಖಾಸಗಿ ವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದ ದೇವೇಗೌಡರು ಸಂಸ್ಥೆಯ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ಹೇಳಿಕೆ ನೀಡಿದ್ದರು ಎಂದು ಆರೋಪಿಸಿ ನೈಸ್ ಕಂಪನಿ ಮಾನನಷ್ಟ ಮೊಕದ್ದಮೆ ಹೂಡಿತ್ತು.

ಕಂಪನಿ ವಿರುದ್ಧ ಆರೋಪ ಸಾಬೀತುಪಡಿಸುವಲ್ಲಿ ದೇವೇಗೌಡರು ವಿಫಲರಾಗಿದ್ದಾರೆ. ಹೀಗಾಗಿ ಕಂಪನಿಗೆ 2 ಕೋಟಿ ರೂ. ಪರಿಹಾರ ನೀಡಬೇಕೆಂದು ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲನಗೌಡ ತೀರ್ಪು ನೀಡಿದ್ದಾರೆ.

2011ರ ಜೂನ್ 20ರಂದು ಸುದ್ದಿ ವಾಹಿನಿಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ನೈಸ್ ವಿರುದ್ಧ ದೇವೇಗೌಡರು ಆರೋಪ ಮಾಡಿದ್ದರು.



# ಕೂಡ್ಲಿಗಿ ತಾಲ್ಲೂಕಿನ 74 ಕೆರೆಗಳಿಗೆ ನೀರು



**ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ**

ಕೂಡ್ಲಿಗಿ, ಜೂ.22- ತಾಲ್ಲೂಕಿನ 74 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೊಳಿಸಿ, ಸರ್ಕಾರ ನಿನ್ನೆ ಆದೇಶಿಸಿ ಅಸ್ತು ಎಂದಿರುವುದು ತಾಲ್ಲೂಕಿನ ಬರಗಾಲಕ್ಕೆ ಮುಕ್ತಿ ಸಿಕ್ಕಿದಂತಾಗಿದೆ. ಈ ಹಿನ್ನೆಲೆಯಲ್ಲಿ ಇಂದು ಪಟ್ಟಣದ ಶ್ರೀ ಮದಕರಿ ವೃತ್ತದಲ್ಲಿ ಸಂಭ್ರಮಾಚರಣೆ ಆಚರಿಸಲಾಯಿತು.

ಹೋರಾಟ ಸಮಿತಿ ಸದಸ್ಯರು ಸಿಹಿ ಹಂಚಿ, ಪಟಾಕಿ ಸಿಡಿಸಿ, ಶಾಸಕರ ಪರ ಜಯಘೋಷಗಳನ್ನು ಕೂಗಿದರು. ವಿವಿಧ ಪಕ್ಷಗಳ ಮುಖಂಡರು ಮಾತನಾಡಿ, ಶಾಸಕರಿಗೆ ಅಭಿನಂದನೆ ಸಲ್ಲಿಸಿದರು. ಹೋರಾಟ ಸಮಿತಿ ಮುಖಂಡರಾದ ಗುರುಸಿದ್ಧನಗೌಡ, ಕೆ.ಎಂ. ತಿಪ್ಪೇಸ್ವಾಮಿ, ಪ.ಪಂ. ಸದಸ್ಯ ಕಾಲ್ಚೆಟ್ಟಿ ಈಶಪ್ಪ ಮಾತನಾಡಿದರು.

**ಹೋರಾಟದ ಹಿನ್ನೆಲೆ:** ನೀರಾವರಿ ಯೋಜನೆಗಾಗಿ ಸಾಕಷ್ಟು ಹೋರಾಟಗಳು ನಡೆಸಲಾಗಿದೆಯಾದರೂ ಫಲ ಸಿಕ್ಕಿರಲಿಲ್ಲ. ಹೋರಾಟಗಾರರ ಬೇಡಿಕೆಯನ್ನು ಆಲಿಸುವುದರ ಜೊತೆಗೆ, ನಾನು ಗೆದ್ದರೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೆ ತರುತ್ತೇನೆ ಎಂದು ಚುನಾವಣೆ ಸಂದರ್ಭದಲ್ಲಿ ಕೊಟ್ಟಿದ್ದ ಮಾತನ್ನು ಶಾಸಕ ಎನ್.ವೈ. ಗೋಪಾಲಕೃಷ್ಣ ಉಳಿಸಿಕೊಂಡಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನ 74 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ನಬಾರ್ಡ್‌ನಿಂದ 670 ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಯಡಿಯೂರಪ್ಪ ಘೋಷಿಸಿದ್ದಾರೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

# ಕೋವ್ಯಾಕ್ಸಿನ್ ಮೂರನೇ ಪ್ರಯೋಗದ ವರದಿ ಅಂಗೀಕಾರ

ನವದೆಹಲಿ, ಜೂ. 22 – ಭಾರತ್ ಬಯೋಟೆಕ್‌ನ ಕೊರೊನಾ ಲಸಿಕೆಯಾದ ಕೋವ್ಯಾಕ್ಸಿನ್‌ನ ಮೂರನೇ ಹಂತದ ಪ್ರಾಯೋಗದ ವರದಿಯನ್ನು ಕೇಂದ್ರ ಔಷಧ ಪ್ರಾಧಿಕಾರದ ಪರಿಣಿತರ ಸಮಿತಿ ಅಂಗೀಕರಿಸಿದೆ ಎಂದು ಮೂಲಗಳು ತಿಳಿಸಿವೆ. 25,800 ಜನರ ಮೇಲೆ ಪ್ರಯೋಗ ನಡೆಸಿದಾಗ ಲಸಿಕೆ ಶೇ.77.8ರಷ್ಟು ಪರಿಣಾಮಕಾರಿ ಎಂಬುದು ಕಂಡು ಬಂದಿರುವುದಾಗಿ ಭಾರತ್ ಬಯೋಟೆಕ್ ತಿಳಿಸಿದೆ.












JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte